# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
75,000
HAMPI TIMES E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



| | | | | | | | |
|---|---|---|---|---|---|---|---|
| ಸಂಪುಟ:02 | ಸಂಚಿಕೆ: 26 | ನೋಂದಣಿ ನಂ.:KARKAN27911 | ವಿಜಯನಗರ | 20.07.2024 | ಶನಿವಾರ | ಪುಟ:04 | ಬೆಲೆ:2 |
| Volume:02 | Issue: 26 | Reg.No:KARKAN27911 | VIJAYANAGARA | 20.07.2024 | Saturday | Page:04 | Rs:2 |



ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...
94486 33038 www.hampitimes.com / epaper.hampitimes.com Vijayanagara hampitimes@gmail.com
ಹಂಪಿ ಟೈಮ್ಸ್ ಇ-ಪೇಪರ್



ಹಂಪಿ ಟೈಮ್ಸ್ ಮಾರ್ಗದರ್ಶಿ ಇ-ಪೇಪರ್‌ನಲ್ಲೂ ಲಭ್ಯ ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

AADI BAJAJ
JOB Vacancies HOSAPETE
1) Sales Executive
2) Spare Parts Incharge
3) Computer Coperater
Qualification
ITI or Diploma in Automobile or Mechanical Preferred or Any Degree. Experienced in TWO Wheeler Industries preferred
Contact
9731361414
E-mail:
aadibajajhospet@gmail.com


# ತುಂಗಭದ್ರಾ ಜಲಾಶಯ ಅರ್ಧ ಭರ್ತಿ

## ಒಂದೇ ದಿನದಲ್ಲಿ 9 ಟಿಎಂಸಿ ನೀರು ಒಳ ಹರಿವು | ಡ್ಯಾಂನಲ್ಲಿ ಈಗ 55 ಟಿಎಂಸಿ ನೀರು ಸಂಗ್ರಹ

## 1 ಲಕ್ಷಕ್ಕೂ ಅಧಿಕ ಕ್ಯುಸೆಕ್ ಒಳಹರಿವು | ರೈತರಲ್ಲಿ ಹೆಚ್ಚಿದ ಸಂಭ್ರಮ | ಡ್ಯಾಂ ಭರ್ತಿಗೆ ದಿನಗಣನೆ



>>3

# ವಿದ್ಯಾರ್ಥಿಗಳಿಗೆ ಶಿಕ್ಷಕರಾದ ಡಿಸಿ ದಿವಾಕರ ಜಿಲ್ಲಾಧಿಕಾರಿ ಪಾಠಕ್ಕೆ ಬೆರಗಾದ ಶಿಕ್ಷಕರು

## ಮಕ್ಕಳ ಕಲಿಕಾ ಪರೀಕ್ಷೆ | ಕಂದಾಯ ಅಧಿಕಾರಿಗಳು ನಡೆಸುವ ಆಸ್ತಿಗಳ ಸರ್ವೇ ಪರಿಶೀಲನೆ



**ಹಂಪಿ ಟೈಮ್ಸ್ ಹೊಸಪೇಟೆ**

ಮಾಲವಿ ಜಲಾಶಯ ಕ್ರಸ್ಟ್‌ಗೇಟ್ ಪರಿಶೀಲನೆಗೆ ತೆರಳುವ ಮಾರ್ಗಮದ್ಯೆ ಹಗರಿಬೊಮ್ಮನಹಳ್ಳಿ ತಾಲೂಕಿನ ಪಿಂಜಾರ ಹೆಗ್ಡಾಳ್ ಸರ್ಕಾರಿ ಪ್ರೌಢಶಾಲೆಗೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ದಿಢೀರ್ ಭೇಟಿ ನೀಡಿ, ಮಕ್ಕಳಿಗೆ ಜೀವಶಾಸ್ತ್ರ ಪಾಠ ಮಾಡಿದರು. ಈವರೆಗೂ ನಡೆದ ಪಾಠದ ಕುರಿತು ಕೇಳಿದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಶಿಕ್ಷಕರ ನೆರವಿ ನೊಂದಿಗೆ ಉತ್ತರಿಸಿದರು. ಜಿಲ್ಲಾಧಿಕಾರಿಗಳ ದಿಢೀರ್ ಭೇಟಿ, ವಿದ್ಯಾರ್ಥಿಗಳಲ್ಲಿ ಕಲಿಕೆಯ ಹುಮ್ಮಸ್ಸು ಹೆಚ್ಚಿಸಿದರೆ, ಶಿಕ್ಷಕರನ್ನೂ ಜಾಗೃತಿಗೊಳಿಸಿತು.

ಹಗರಿಬೊಮ್ಮನಹಳ್ಳಿ ತಾಲೂಕಿನ ಮಾಲವಿ ಜಲಾಶಯಕ್ಕೆ ಭೇಟಿ ನೀಡಿದರು. ಮಾಲವಿ ಜಲಾಶಯದಲ್ಲಿ ಟ್ರಸ್ಟ್ ಗೇಟ್ ದುರಸ್ಥಿ ಕಾರ್ಯಗಳ ಬಗ್ಗೆ ಪರಿಶೀಲನೆ ನಡೆಸಿದರು. ಇತ್ತೀಚೆಗೆ ನಡೆದ ಕಾಮಗಾರಿಗಳಿಂದಾಗಿ ಹಾಳಾಗಿರುವಂತಹ ಗೇಟ್ ದುರಸ್ತಿಯಾದಲ್ಲಿ ಅನುಕೂಲವಾಗಲಿದೆ ಎಂದು ಇದೆ ವೇಳೆ ರೈತ ಸಂಘಟನೆಗಳ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದರು. ಗೇಟ್ ದುರಸ್ತಿ ಕಾರ್ಯಕ್ಕೆ ಸಂಬಂಧಿಸಿದಂತೆ ಕೂಡಲೇ ಅಗತ್ಯ ಕ್ರಮವಹಿಸಬೇಕು ಎಂದು ನೀರಾವರಿ ಇಲಾಖಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬಳಿಕ ಜಿಲ್ಲಾಧಿಕಾರಿಗಳು ಚಿತ್ರಪಳ್ಳಿ ಕೆರೆಗೆ ಭೇಟಿ ನೀಡಿ ಪರಿಶೀಲಿಸಿರು.

**ಅನಿರೀಕ್ಷಿತ ಭೇಟಿ:** ಕಂದಾಯ ಅಧಿಕಾರಿಗಳು ಮಾಡುತ್ತಿದ್ದ ಸರ್ಕಾರಿ ಆಸ್ತಿಗಳ ಸರ್ವೇ ಕಾರ್ಯದ ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಅನಿರೀಕ್ಷಿತವಾಗಿ ಭೇಟಿ ನೀಡಿ ಪರಿಶೀಲಿಸಿದರು. ವಿಜಯನಗರ ಜಿಲ್ಲೆಯಲ್ಲಿ ಒಟ್ಟು 62,737 ಸರ್ಕಾರಿ ಆಸ್ತಿಗಳಿದ್ದು ಈ ಪೈಕಿ ಈಗಾಗಲೇ 56,806 ಸರ್ಕಾರಿ/ಅನಾದೀನ ಆಸ್ತಿಗಳನ್ನು ಹೊಸದಾಗಿ ಸಿದ್ದಪಡಿಸಿರುವ ಲ್ಯಾಂಡ್ ಬೀಟ್ ಅಪ್ಲಿಕೇಶನಲ್ಲಿ ಕಂದಾಯ ಅಧಿಕಾರಿಗಳು ಸರ್ವೇ ಮಾಡಿ ಫೋಟೋ ಸಹಿತ ಮಾಹಿತಿ ಸಂಗ್ರಹಿಸುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

**ಅಧಿಕಾರಿಗಳಿಗೆ ಸೂಚನೆ:**
ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಸರ್ವೇ ಮಾಡಲು ಬಾಕಿ ಉಳಿದಂತಹ ಆಸ್ತಿಗಳನ್ನು ಕೂಡಲೇ ಮುಕ್ತಾಯಗೊಳಿಸುವಂತೆ ಇದೆ ವೇಳೆ ಜಿಲ್ಲಾಧಿಕಾರಿಗಳು, ಅಧಿಕಾರಿಗಳಿಗೆ ಸೂಚನೆ ನೀಡಿದರು. ಸರ್ಕಾರಿ ಆಸ್ತಿಗಳಲ್ಲಿ ಅನಧಿಕೃತವಾಗಿ ಒತ್ತುವರಿಯಾಗದಂತೆ ಹಾಗೂ ಸರ್ಕಾರಿ ಆಸ್ತಿಗಳಲ್ಲಿ ಅನಧಿಕೃತ ಕಟ್ಟಡ, ಕಾಮಗಾರಿ ಹಾಗೂ ಇತರೆ ಅನಧಿಕೃತ ಚಟುವಟಿಕೆಗಳು ನಡೆಯದಂತೆ ನೋಡಿಕೊಳ್ಳುವಂತೆ ಸಹ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



# 87 ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆ



ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 87 ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಲಾಂಛನವನ್ನು ವಿಧಾನಸೌಧದಲ್ಲಿ ಶುಕ್ರವಾರ ಬಿಡುಗಡೆಗೊಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ್ ತಂಗಡಗಿ, ಕೃಷಿ ಸಚಿವ ಚಲುವರಾಯಸ್ವಾಮಿ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ನರೇಂದ್ರಸ್ವಾಮಿ, ದಿನೇಶ್ ಗೂಳಿಗೌಡ ಮತ್ತು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಉಪಸ್ಥಿತರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi | ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು | SCAN & READ E-PAPER


Date: 20-07-2024

SSLC HINDI Hampi Times Margadarshi 2024-25

**10 ನೇ ತರಗತಿ** **ಹಿಂದಿ**



## कश्मीरी सेब
(कहानी)




### I . अनुरूपता :

1) कश्मीरी सेब बेचनेवाला : बेईमानी :: रेवडी बेचनेवाला : ------ ( ईमानदार )
2) नागपुर : संतरा :: कश्मीर : --- ( सेब )
3) सेब : फल :: गाजर : ------ ( सब्जी )
4) कपडा : नापना :: टोमाटो : ----- ( तौलना )

### II . एक वाक्य में उत्तर लिखिए |

5) प्रेमचंद जी का जी क्यो ललचा उठा ?
**रंगदार गुलाबी सेब को देखकर** प्रेमचंद जी का जी ललचा उठा |

6) प्रेमचंद जी चौक में क्यो गये थे ?
**दो- चार जरूरी चीजें खरीदने के लिए** प्रेमचंद जी चौक में गये थे |

7) लेखक प्रेमचंद जी को दूकान में क्या नजर आया ?
लेखक प्रेमचंद जी को दूकान में **रंगदार गुलाब सेब** नजर आया |

8) टोमाटो किसका आवश्यक अंग बन गया है ?
टोमाटो **भोजन का** आवश्यक अंग बन गया है |

9) रोज एक सेब खाने से किनकी जरूरत नहीं होगी ?
रोज एक सेब खाने से **डॉक्टरों की जरूरत** नहीं होगी |

www.hampitimes.com - Hampi Times Margadarshi

### II. दो - तीन वाक्यो में उत्तर लिखिए |

10) कश्मीरी सेब पाठ से आपको क्या सीख मिलती है ?
कश्मीरी सेब पाठ से हमें यह सीख मिलती है कि - अगर खरीदारी करते समय सावधानी नही बरतें तो धोखा खाने की संभावना होती है ।

11) दूकानदार ने लेखक से क्या कहा ?
दूकानदार ने लेखक से इस तरह कहा कि -बाबूजी, बडे मजेदार सेब आए है, खास कश्मीर के आप ले जाएँ, खाकर तबीयत खुश हो जायेगी ।

12) गाजर के बारे में लेखक प्रेमचंद जी का राय क्या है ?
गाजर भी पहले गरीबों की पेट भरने की चीज थी । अमीर लोग तो उसका हलवा ही खाते थे ; मगर अब पता चला है कि गाजर में भी बहुत विटामिन है ; इसलिए गजर को भी मेजों पर स्थान मिलने लगा है ।

### IV. तीन – चार वाक्यों में उत्तर लिखिए |

13) मुहर्रम के मेले में लेखक प्रेमचंद जी का अनुभव बताइए ।
एक बार लेखक ने मुहर्रम के मेले में एक दूकानदार से एक पैसे की रेवडियाँ ली थी और पैसे की जगह अठन्नी दे आया था । घर आकर जब अपनी भूल मालूम हुई तो दूकानदार के पास दौडा गया । आशा नही थी कि वह अठन्नी लौटायेगा, पर लेकिन उसने प्रसन्नचित्त से अठन्नी लौटा दी और उलटे मुझसे क्षमा माँगी ।

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ. ಶಿಕ್ಷಕರು ಸರಕಾರಿ ಪ್ರೌಢ.ಶಾಲೆ ಮಗಿಮಾವಿನಹಳ್ಳಿ. ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಹಂಪಿ ಟೈಮ್ಸ್
HAMPI TIMES

## ವಿಜ್ಞಾನ

### ವಿದ್ಯುತ್ ಪರಿಚಲನೆ ಏಕೆ ಗೋಚರಿಸುವುದಿಲ್ಲ?

■ ಆರ್.ಬಿ.ಗುರುಬಸವರಾಜ

ಸಂಜೆ ಕಳೆದು ಕತ್ತಲಾಗುತ್ತಾ ಬಂದಿತ್ತು. ತಾಯಿ ಅರುಣನಿಗೆ ಬಲ್ಬ್‌ನ ಸ್ವಿಚ್ ಹಾಕಲು ಹೇಳಿದಳು. ಅರುಣ ಸ್ವಿಚ್ ಹಾಕಿದ ಕೂಡಲೇ ಬಲ್ಬ್ ಹೊತ್ತಿಕೊಂಡಿತು. ಬಹುದಿನಗಳಿಂದ ಕಾಡುತ್ತಿದ್ದ ಪ್ರಶ್ನೆಯೊಂದು ಮತ್ತೊಮ್ಮೆ ದುತ್ತೆಂದು ಎದುರಾಯಿತು. ಹಾಲ್‌ನಲ್ಲಿ ಕುಳಿತಿದ್ದ ತಂದೆಯನ್ನು ನೋಡಿದ. "ಪಪ್ಪಾ, ಸ್ವಿಚ್ ಹಾಕಿದ ಕೂಡಲೇ ಬಲ್ಬ್ ಹೊತ್ತಿಕೊಳ್ಳುತ್ತೆ, ಫ್ಯಾನ್ ತಿರುಗಲಾರಂಭಿಸುತ್ತದೆ. ಆದರೆ ತಂತಿಯಲ್ಲಿ ವಿದ್ಯುತ್ ಹೇಗೆ ಅಷ್ಟು ವೇಗದಲ್ಲಿ ಚಲಿಸುತ್ತದೆ ಎಂಬುದು ಕಾಣುವುದಿಲ್ಲವಲ್ಲ. ಏಕೆ?" ಎಂದ. ತಂದೆ ನಿಧಾನವಾಗಿ ಅವನ ಪ್ರಶ್ನೆಗೆ ಉತ್ತರಿಸತೊಡಗಿದರು.

ವಿದ್ಯುತ್ ಪರಿಚಲನೆಯು ವಿದ್ಯುತ್ ಪ್ರವಾಹದ ಹರಿವನ್ನು ಸೂಚಿಸುವ ಅಂಶವಾಗಿದ್ದು, ಎಲೆಕ್ಟ್ರಾನ್‌ಗಳಂತಹ ಆವೇಶಭರಿತ ಕಣಗಳು ವಾಹಕದ ಮೂಲಕ ಚಲಿಸಿದಾಗ ಅದು ಸಂಭವಿಸುತ್ತದೆ. ವಿದ್ಯುತ್ ಪರಿಚಲನೆಗೆ ವಿದ್ಯುಚ್ಛಕ್ತಿಯ ಅತ್ಯಗತ್ಯವಾಗಿದೆ.



ಬಹುಪಯೋಗಿಯಾದ ವಿದ್ಯುತ್ ಪರಿಚಲನೆಯು ವಾಹಕಗಳಲ್ಲಿ ಹರಿಯುವಾಗ ಕಣ್ಣಿಗೆ ಗೋಚರಿಸುವುದಿಲ್ಲ. ಇದಕ್ಕೆ ಕೆಲವು ಕಾರಣಗಳಿವೆ.

ವಿದ್ಯುತ್ ಪರಿಚಲನೆಯು ಗೋಚರಿಸದಿರಲು ಒಂದು ಕಾರಣವೆಂದರೆ ಇದು ಎಲೆಕ್ಟ್ರಾನ್‌ಗಳ ಹರಿವು ಆಗಿದೆ. ಇದರಲ್ಲಿನ ಉಪಪರಮಾಣು ಕಣಗಳು ಬರಿಗಣ್ಣಿನಿಂದ ನೋಡಲಾಗದಷ್ಟು ಚಿಕ್ಕದಾಗಿರುತ್ತವೆ. ಅತ್ಯಂತ ಶಕ್ತಿಶಾಲಿ ಸೂಕ್ಷ್ಮದರ್ಶಕಗಳಿಂದಲೂ ಸಹ ತಂತಿಯ ಮೂಲಕ ಚಲಿಸುವ ಎಲೆಕ್ಟ್ರಾನ್‌ಗಳನ್ನು ವೀಕ್ಷಿಸಲು ಸಾಧ್ಯವಿಲ್ಲ. ಅಲ್ಲದೇ ವಿದ್ಯುತ್ ಪ್ರವಾಹಗಳು ಸಾಮಾನ್ಯವಾಗಿ ಅಪಾರದರ್ಶಕವಾಗಿರುವ ತಂತಿಗಳು ಅಥವಾ ಸರ್ಕ್ಯೂಟ್‌ಗಳಂತಹ ವಾಹಕ ವಸ್ತುಗಳ ಮೂಲಕ ಹರಿಯುತ್ತವೆ ಮತ್ತು ವಿದ್ಯುದ್ದಾವೇಶದ ಹರಿವನ್ನು ವೀಕ್ಷಿಸಲು ನಮಗೆ ಅನುಮತಿಸುವುದಿಲ್ಲ.

ವಿದ್ಯುತ್ ಪರಿಚಲನೆಯು ಅತೀ ವೇಗದಲ್ಲಿ ಸಂಭವಿಸುತ್ತದೆ. ಸಾಮಾನ್ಯವಾಗಿ ಪ್ರತಿ ಸೆಕೆಂಡಿಗೆ ಲಕ್ಷಾಂತರ ಅಥವಾ ಶತಕೋಟಿ ಎಲೆಕ್ಟ್ರಾನ್‌ಗಳ ನಿರ್ದಿಷ್ಟ ದಿಕ್ಕಿನಲ್ಲಿ ಪ್ರವಹಿಸುತ್ತವೆ. ಹಾಗಾಗಿ ವಿದ್ಯುತ್ ಪ್ರವಾಹವು ನಮಗೆ ಕಾಣದಿರಲು ಇದೂ ಒಂದು ಕಾರಣವಾಗಿದೆ.

ವಿದ್ಯುತ್ ಪರಿಚಲನೆಯು ಬರಿಗಣ್ಣಿಗೆ ಗೋಚರಿಸದಿದ್ದರೂ, ಅದರ ಪರಿಣಾಮಗಳನ್ನು ವಿವಿಧ ಉಪಕರಣಗಳ ಮೂಲಕ ನೋಡಬಹುದು. ಉದಾಹರಣೆಗೆ ತಂತಿಯ ಬಿಸಿ, ಬಲ್ಬ್ ಬೆಳಗಿಸುವುದು, ಫ್ಯಾನ್ ಸುತ್ತುವುದು ಅಥವಾ ಸ್ಪೀಕರ್ ಝೇಂಕರಿಸುವುದು ಮುಂತಾದವುಗಳ ರೂಪದಲ್ಲಿ ವಿದ್ಯುತ್ ಪ್ರವಹಿಸಿರುವುದು ಅನುಭವಕ್ಕೆ ಬರುತ್ತದೆ. ಅಲ್ಲದೇ ಕೆಲವು ಸಾಧನಗಳನ್ನು ಬಳಸಿ ಅಳೆಯಬಹುದು. ಉದಾಹರಣೆಗೆ ಅಮ್ಮೀಟರ್‌ಗಳು, ವೋಲ್ಟ್‌ಮೀಟರ್‌ಗಳು, ಆಸಿಲ್ಲೋಸ್ಕೋಪ್‌ಗಳು ಮತ್ತು ಇತರ ಸಾಧನಗಳ ಮೂಲಕ ಅಳೆಯಬಹುದು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ತಂಗಿಗೊಂದು ಪತ್ರ

ಪುಟ್ಟಿ, ನಿನ್ನನ್ನು ಬೀಳ್ಕೊಂಡು ಊರಿಗೆ ಬಂದಾಗಿನಿಂದ ನಿನ್ನದೇ ಚಿಂತೆ. ದೇಹ ಇಲ್ಲಿದೆಯಷ್ಟೇ ಮನವೆಲ್ಲಾ ನಿನ್ನ ಸುತ್ತಲೇ ತಿರುಗುತ್ತಿದೆ.

ಅಕ್ಕ ಮತ್ತು ನನ್ನ ನಂತರ ಹುಟ್ಟಿದ ನೀನು ನಮ್ಮ ಮನೆಯ ಪುಟ್ಟ ಕೂಸು. ನಿನಗೆ ನೆನಪಿದೆಯೇ.. ಎಷ್ಟೋ ಬಾರಿ ನಿನಗೆ ಹೇಳುತ್ತಿದ್ದೆವಲ್ಲ ನೀನು ಮುಪ್ಪಿನ ಮುದುಕಿಯಾದರೂ ನಮ್ಮ ಪಾಲಿಗೆ ಪುಟ್ಟಿಯೇ ಎಂದು. ಅದೆಷ್ಟು ಚಂದವಿತ್ತು ನಮ್ಮ ಬಾಲ್ಯ. ಅದರಲ್ಲೂ ಅಪ್ಪ ಅಮ್ಮ ನಾನು ಅಕ್ಕ ಮತ್ತು ಬಹಳ ದಿನಗಳ ನಂತರ ಹುಟ್ಟಿದ ನೀನು ನಮ್ಮ ಮನೆಯ ಕಣ್ಮಣಿ, ನಮ್ಮೆಲ್ಲರ ಮಾತುಕತೆಯ ಕೇಂದ್ರಬಿಂದು ನೀನೇ ಆಗಿದ್ದೆ ಅಲ್ಲವೇ! ದಿನಗಳು ಕಳೆದದ್ದೇ ಗೊತ್ತಾಗದಂತೆ ನಮ್ಮೆಲ್ಲರ ಬಾಲ್ಯ ಕಳೆದು ಯೌವನಕ್ಕೆ ಬಂದಿದ್ದೆವು. ಅಕ್ಕ ಮತ್ತು ನಿನ್ನನ್ನು ಒಂದೇ ಮನೆಗೆ ಮದುವೆ ಮಾಡಿ ಕೊಟ್ಟಾಗ ಅಂದುಕೊಂಡದ್ದು ಪುಟ್ಟಿಗೆ ಅಕ್ಕನ ಆಸರೆ ಇರುತ್ತದೆ ಎಂದು. ಆಕೆ ಸದಾ ನಿನ್ನನ್ನು ಕಾಯುತ್ತಾಳೆ ಎಂದು. ಅಲ್ಲಿಯೂ ನಿನ್ನ ಕುರಿತೆ ಕಾಳಜಿ.

ಮದುವೆಯಾಗಿ ಅದೆಷ್ಟೋ ವರ್ಷಗಳವರೆಗೆ ನಿನ್ನ ಮಡಿಲು ತುಂಬದೇ ಇದ್ದಾಗ ಬೇಸರವಾದರೂ ಮುಂದೆ ನಿಮ್ಮ ಮನೆ ಬೆಳಗುವ ದೀಪಕ ಹುಟ್ಟಿದಾಗ ನಮ್ಮ ಖುಷಿಗೆ ಪಾರವೇ ಇರಲಿಲ್ಲ. ನೀನು, ನಿನ್ನ ಪತಿ ಮತ್ತು ಮಗ ಪುಟ್ಟ ಸಂಸಾರದ ಸರಿಗಮದಲ್ಲಿ ಯಾವ ಅಪಸ್ವರವು ಇಲ್ಲದೆ ಈ ಇಪ್ಪತ್ತು ವರ್ಷಗಳು ಕಳೆದು ಹೋಗಿದ್ದವು. ನಿನ್ನ ಪತಿಯ ಜೊತೆಗೆ ಅಂಗಡಿಯಲ್ಲಿ ಕೈಗೂಡುತ್ತಿದ್ದ ನೀನು ಓದಿ ಕಾಲೇಜು ಅಧ್ಯಾಪಕಿಯಾದದ್ದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿತ್ತು ಆದರೆ ವಿಧಿಯ ವಿಪರ್ಯಾಸ ನೋಡು... ಯಾವ ಆರೋಗ್ಯ ಸಮಸ್ಯೆಗಳಿಲ್ಲದೆ ಆರಾಮಾಗಿ ಓಡಾಡಿಕೊಂಡಿದ್ದ ನಿನ್ನ ಪತಿಯನ್ನು ಪುಟ್ಟದೊಂದು ದೈಹಿಕ ತೊಂದರೆಯ ನೆಪದಲ್ಲಿ ಒಂದು ತಿಂಗಳ ಕಾಲ ಒದ್ದಾಡಿಸಿ ತನ್ನೆಡೆಗೆ ಕರೆಸಿಕೊಂಡುಬಿಟ್ಟ ಆ ಭಗವಂತ. ಎಲ್ಲ ಆತನ ಇಚ್ಛೆ.

ಈಗಾಗಲೇ 20 ದಿನಗಳು ಉರುಳಿ ಹೋದವು. ಮೊನ್ನೆಯ ದಿನ ನಿನ್ನನ್ನು ನಾನು ನೋಡಲು ಬಂದಾಗ ಅಮ್ಮನೊಂದಿಗೆ ಒಳಕೋಣೆಯಲ್ಲಿ " ಅಮ್ಮ ನನ್ನನ್ನು ಯಾಕೆ ಹೆತ್ತೆ ನೀನು? ಇಬ್ಬರು ಮಕ್ಕಳಿದ್ರಲ್ವಾ ನಿನಗೆ? ಎಂದು ನೀನಂದ ಮಾತುಗಳು ನನ್ನ ಕಣ್ಣಂಚಿನಲ್ಲಿ ನೀರು ತರಿಸಿದರೆ "ನಾನು ಯಾರಿಗಾಗಿ ಬದುಕಿರಲಿ" ಎಂದು ನೀನು ಅತ್ತಾಗ ನನ್ನ ಎದೆಗೆ ಶೂಲದಿಂದ ಇರಿದಂತಹ ನೋವು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ನಿಜ ಪುಟ್ಟಿ ನಿನಗಾದ ನಷ್ಟವನ್ನು ನಾವ್ಯಾರೂ ತುಂಬಿಕೊಡಲು ಸಾಧ್ಯವಿಲ್ಲ. ನಮ್ಮೆಲ್ಲಾ ಪ್ರಯತ್ನಗಳ ಹೊರತಾಗಿಯೂ ಭಾವನಂತಹ ಒಳ್ಳೆಯ ವ್ಯಕ್ತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂಬ ನೋವು ಈಗಲೂ ಕಾಡುತ್ತದೆ. ವಿಧಿಯ ಮುಂದೆ ನಾವೆಷ್ಟರವರು? ಪುಟ್ಟಿ, ಈ ಜಗತ್ತಿಗೆ ಕಾಲಿಡುವಾಗಲು ಒಬ್ಬರೇ ಸಾಯುವಾಗಲೂ ಅಷ್ಟೇ. ನಾವಾರೂ ಇಲ್ಲಿ ಶಾಶ್ವತವಾಗಿ ಇರಲು ಬಂದವರಲ್ಲ. ತುಸು ಬೇಗನೇ ಭಾವನ ಸರದಿ ಬಂದಿದೆ, ಇದನ್ನು ಒಪ್ಪಿಕೊಳ್ಳಲು ನಮ್ಮ ಮನಸ್ಸು ಗಳು ಇನ್ನೂ ತಯಾರಾಗಿಲ್ಲ ಎಂಬುದು ನಿಜವಾದರೂ ಒಪ್ಪಲೇ ಬೇಕಾದಂತಹ ಅನಿವಾರ್ಯತೆ ನಮ್ಮೆಲ್ಲರದು. ಸಮಯ ಎಲ್ಲ ಸಂಕಟ, ನೋವು ಮನದಾಳದ ಗಾಯವನ್ನು ಮರೆಸುತ್ತದೆ....ಮರೆಯಬೇಕು ಕೂಡ.



ಇದುವೇ ಜೀವನ ಅಲ್ವೇ ಪುಟ್ಟಿ. ನೀನು ಅಂದು ಹೇಳಿದ ಇನ್ನೊಂದು ಮಾತು ನಾನು ಯಾರಿಗಾಗಿ ಬದುಕಿರಲಿ ಎಂದು ಅಲ್ವೇ ಪುಟ್ಟಿ.. ನೀನು ನಿನ್ನನ್ನು ಪ್ರೀತಿಸುವ ಅಪ್ಪ, ಅಮ್ಮ, ಅಕ್ಕ ಮತ್ತು ನಮ್ಮೆಲ್ಲರಿಗಾಗಿ ಬದುಕಬೇಕು. ನಿನ್ನ ಮತ್ತು ಭಾವನ ಪ್ರೀತಿಯ ದ್ಯೋತಕವಾದ ದೀಪಕನಿಗಾಗಿ ಬದುಕಬೇಕು, ನಿನಗಾಗಿ ಬದುಕಬೇಕು.

ಈ ಬದುಕು ಒಂದು ರೈಲಿನ ಪಯಣದಂತೆ... ನಾವೆಲ್ಲರೂ ಪಯಣಿಗರು. ಆ ದೇವರು ನಿಗದಿಪಡಿಸಿ ದಂತೆ ನಮ್ಮ ಪಯಣ ಪ್ರಾರಂಭವಾಗಿ ಅಲ್ಲಿಗೆ ಎಲ್ಲ ಸಂಬಂಧಗಳು ಜೊತೆಯಾಗಿ ನಮ್ಮ ನಮ್ಮ ನಿಲುಗಡೆ ಬರುವವರೆಗೆ ತುಸು ದೂರ ಜೊತೆಯಾಗಿ ಸಾಗುತ್ತೇವೆ. ಅವರವರ ಸರದಿ ಬಂದಾಗ ಪಯಣವನ್ನು ಮುಗಿಸಿ ಇಳಿಯಲೇಬೇಕು.... ಶಿಕ್ಷಕಿಯಾದ ನಿನಗೆ ಇದು ಗೊತ್ತಿಲ್ಲದ್ದೇನಲ್ಲ.

ಇದುವರೆಗೂ ಮಗಳಾಗಿ, ಸೋದರಿಯಾಗಿ, ಪತ್ನಿಯಾಗಿ ನಿನ್ನ ಕರ್ತವ್ಯಗಳನ್ನು ನೀನು ನಿಭಾಯಿಸಿರುವೆ.... ಇದೀಗ ನೀನು ತಾಯಿಯಾಗಿ ಮಾತ್ರವಲ್ಲ, ತಂದೆಯಾಗಿಯೂ ಕೂಡ ದೀಪಕನ ವಾಬ್ದಾರಿಯನ್ನು ಹೊರಬೇಕು. ಆತನಿಗೆ ಒಳ್ಳೆಯ ಶಿಕ್ಷಣ, ಬದುಕನ್ನು ಕೊಡುವ ಮಹತ್ತರ ಹೊಣೆಗಾರಿಕೆ ಕೇವಲ ನಿನ್ನದು ಮಾತ್ರ. ಎಂದಿನಂತೆ ನಿನ್ನ ಬೆನ್ನ ಹಿಂದೆ ನಿನಗೆ ಎಲ್ಲ ರೀತಿಯ ಸಹಾಯ ಸಹಕಾರ ನೀಡಲು ನಿನ್ನ ಅಣ್ಣ ಇದ್ದೇ ಇರುತ್ತಾನೆ.

ದೀಪಕನ ಸೋತ ಮೊಗದಲ್ಲಿ ಸಮಾಧಾನದ ನಗು ಮೂಡಿಸಲು ನಿನ್ನ ಚೇತರಿಕೆಯ ಅಗತ್ಯವಿದೆ. ಭಾವನ ಜೊತೆಗಿನ ಒಡನಾಟ ನಮ್ಮೆಲ್ಲರ ಸ್ಮೃತಿಯಲ್ಲಿ ಮಧುರ ನೆನಪಾಗಿ ಉಳಿಯಲಿ. ನಿನ್ನ ನೋವನ್ನು ಮರೆಸುವ ಶಕ್ತಿಯನ್ನು ಆ ಭಗವಂತ ನಿನಗೆ ಕೊಡಲಿ ಎಂದು ಅನವರತ ಪ್ರಾರ್ಥಿಸುವ ಅಪ್ಪ ಅಮ್ಮನಿಗಾಗಿಯಾದರೂ ನೀನು ಸುಧಾರಿಸಿಕೊಳ್ಳಲೇಬೇಕು.... ವಯೋ ಸಹಜ ಅಶಕ್ತತೆಯ ಜೊತೆಗೆ ನಿನ್ನ ಬದುಕು ಹೀಗಾಗಿ ಹೋಯಿತು ಎಂಬ ನೋವು ಅವರನ್ನು ಮತ್ತಷ್ಟು ಹಣ್ಣಾಗಿಸಿದೆ. ಅವರ ನೋವಿನ ನಿಟ್ಟುಸಿರುಗಳನ್ನು ಸಮಾಧಾನ ಚಿತ್ತಕ್ಕೆ ತಿರುಗಿಸುವ ಶಕ್ತಿ ಕೇವಲ ನಿನ್ನ ಚೇತರಿಕೆಯಲ್ಲಿದೆ. ಸಾವು ನಿನ್ನನ್ನು ಸಮೀಪಿಸುವ ಮುನ್ನ ಸಾಯುವ ಮಾತಾಡಬೇಡ ಪುಟ್ಟಿ, ಮನಸ್ಸಿಗೆ ತುಂಬಾ ಸಂಕಟವಾಗುತ್ತದೆ. ಬದುಕು ನಮಗೆ ಬಹಳಷ್ಟನ್ನು ಕೊಡುತ್ತದೆ, ಒಂದಷ್ಟನ್ನು ಕಸಿದುಕೊಳ್ಳುತ್ತದೆ. ಭಾವನನ್ನು ಕಳೆದುಕೊಂಡಿರುವ ನೀನು ಮಾನಸಿಕವಾಗಿ ಸೋತಿರುವೆ, ಆದರೆ ಸತ್ತಿಲ್ಲ.

ಜೀವನದ ಅತಿ ದೊಡ್ಡ ಸವಾಲನ್ನು ಎದುರಿಸುತ್ತಿರುವ ನೀನು ಮತ್ತೆ ಸಶಕ್ತಳಾಗಿ ದೀಪಕನ ಬದುಕಿನ ಭವಿಷ್ಯಕ್ಕೆ ಬೆಳಕಿನ ಹಾದಿಯನ್ನು ತೋರು. ನಿನ್ನ ಮುಂದೆ ನಿನ್ನ ಮತ್ತು ನಿನ್ನ ಮಗನ ಭವಿಷ್ಯವಿದ್ದರೆ, ನಿನ್ನ ಹಿಂದೆ ಅಪಾರ ಬಂಧು ಬಳಗದ ಪ್ರೀತಿ ವಿಶ್ವಾಸಗಳ ಬೆಂಬಲವಿದೆ. ಬೇಗನೆ ಚೇತರಿಸಿಕೊಂಡು ನಿನ್ನ ಮಗನ ಭವಿಷ್ಯದ ಕನಸುಗಳ ಚಿತ್ತಾರಕೆ ಬಣ್ಣ ತುಂಬು. ಆತನ ಭವಿತವ್ಯದ ರೆಕ್ಕೆಗಳಿಗೆ ಕಸುವು ತುಂಬು ಎಂದು ನಿನ್ನನ್ನು ಆಗ್ರಹಿಸುವೆ. ಇಂತಿ ನಿನ್ನನ್ನು ಪ್ರೀತಿಸುವ ನಿನ್ನ ಅಣ್ಣ


# ಹಸಿರು ಮಾತುಕತೆ-ವಿಜಯನಗರ ಜಿಲ್ಲೆಯ ಕೃಷಿ ಕಥನಗಳು ಕೃತಿ ಪರಿಚಯ

ವಿಜಯನಗರ ಜಿಲ್ಲೆಯ "ಹಸಿರಿನೊಂದಿಗೆ ಮಾತುಕತೆ" ತಂಡದ ಸದಸ್ಯರು ಬಳಗದ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ 12 ಕೃಷಿ ಸಾಧಕರನ್ನು ಪರಿಚಯಿಸುವ ಈ ಕೃತಿ ಅತೀ ವಿಶಿಷ್ಟವಾದದ್ದು. ಸದಾ ಎಲೆಮರೆಯ ಕಾಯಿಯಂತಿರುವ ಕೃಷಿಕರ ಸಾಧನೆ ಕೇವಲ ಅವರ ಸುತ್ತಮುತ್ತಲ ರೈತರಿಗೆ ಮಾತ್ರ ಅರಿವಾಗಿರುತ್ತದೆ, ಕೃಷಿಯೆಂದರೆ ಕನಿಷ್ಟ ಎಂದು ಹೀಗಳೆಯುವವರ ನಡುವೆ ಕೃಷಿಕರು ಮುನ್ನೆಲೆಗೆ ಬರುವುದೇ ಅಪರೂಪ. ಇಂತಹ ಸಂದರ್ಭದಲ್ಲಿ ಅವರ ಕಷ್ಟ-ಸುಖಗಳ ಕುರಿತಾದ ಲೇಖನ ಅವರ ಮನದಾಳದ ಮಾತುಗಳಿಂದಲೇ ಅಕ್ಷರ ರೂಪಕ್ಕಿಳಿಸುವ ಶ್ರಮ ಈ ಕೃತಿಯಲ್ಲಿದೆ.

ಒಟ್ಟು ಹನ್ನೆರಡು ಕಥನಗಳನ್ನು ಒಳಗೊಂಡಿರುವ ಈ ಹೊತ್ತಿಗೆಯಲ್ಲಿ ಹುಟ್ಟಿದಾರಭ್ಯ ಮಣ್ಣಿನ ಸಹವಾಸದಲ್ಲಿಯೇ ಬೆಳೆದಿರುವ ಕೃಷಿಕರಿಂದ ಹಿಡಿದು ನೌಕರಿಯನ್ನು ತೊರೆದು ಕೃಷಿಯತ್ತ ವಾಲಿ ಸಾಧನೆಗೈದಿರುವ ಕೃಷಿಕರ ಕಥನಗಳು ಇದರಲ್ಲಿವೆ.

ಕನಿಷ್ಟ ಬಂಡವಾಳ, ಅಲ್ಪ ಕೃಷಿ ಭೂಮಿಯಲ್ಲಿ ಗರಿಷ್ಟ ಆದಾಯ ಪಡೆಯುವ ಮತ್ತು ಹಲವಾರು ಕೃಷಿ ಉಪಕಸುಬುಗಳನ್ನು ಅಳವಡಿಸಿಕೊಂಡಿರುವ ಬಸಯ್ಯ, ಮೌಲ್ಯವರ್ಧನೆಯಿಂದ ರಾಜ್ಯವ್ಯಾಪಿ ಹೆಸರು ಗಳಿಸಿ ಅಪೂರ್ವ ಯಶಸ್ಸು ಸಾದಿಸಿರುವ ವಸಂತ ಮಾಲವಿ ದಂಪತಿಗಳ ಅನುಭವಗಳು, ಸವಳು ಭೂಮಿಯಲ್ಲಿ ಬೇಲದ ಹಣ್ಣಿನ ಬೆಳೆ ಮತ್ತು ಮೌಲ್ಯವರ್ದನೆಯ ಉತ್ಪನ್ನಗಳ ಮೂಲಕವೇ ಪ್ರಸಿದ್ಧಿಯಾಗಿ ರಾಜ್ಯೋತ್ಸವ ಪ್ರಶಸ್ಥಿಗೆ ಭಾಜನರಾಗಿರುವ ಕೂಡ್ಲಿಗಿಯ ವಿಶ್ವೇಶ್ವರ ಸಜ್ಜನ್ ಅವರ ಅನುಭವ ಓದುಗರಿಗೆ, ಅದರಲ್ಲೂ ವಿಶೇಷವಾಗಿ ಯುವಕರಿಗೆ ಕೃಷಿಯತ್ತ ಹೆಜ್ಜೆ ಇಡಲು ಸ್ಪೂರ್ತಿ ನೀಡುತ್ತವೆ. ಹೊಸೂರಿನ ಶಿವಕುಮಾರ ಅವರ ಕೂಡು ಕುಟುಂಬದ ಬೇಸಾಯ, ನಗರ ಪ್ರದೇಶದಲ್ಲಿ ಹಸಿರು ಓಯಸಿಸ್ ಸ್ಥಾಪಿಸಿರುವ ಪ್ರಸನ್ನ ಅವರ ಸಾದನೆಗಳು ಶ್ರಮದಿಂದ ಏನಾದರೂ ಸಾಧಿಸಲು ಸಾದ್ಯ ಎಂಬ ಅರಿವನ್ನು ನಮ್ಮಲ್ಲಿ ಮೂಡಿಸುತ್ತವೆ.

ಸರ್ವಸಂಗ ಪರಿತ್ಯಾಗಿಗಳಾದ ನಂದೀಪುರ ಮಠದ ಪರಮಪೂಜ್ಯ ಮಹೇಶ್ವರ ಸ್ವಾಮೀಜಿಗಳು ಕೃಷಿಯಲ್ಲಿ ಸಾಧಿಸಿರುವ ಸಾದನೆ ಹಾಗೂ ತನ್ಮೂಲಕ ಇತರ ಮಠಾದೀಶರು ರೈತರಿಗೆ ಹೇಗೆ ಮಾರ್ಗದರ್ಶನ




ಮಾಡಬೇಕೆಂದು ಪ್ರಾಯೋಗಿಕವಾಗಿ ತೋರಿಸಿಕೊಟ್ಟಿರುವ ಅಪೂರ್ವ ಕಥನವು ಕೃತಿಯ ವಿಶೇಷ. ಮನಸ್ಸು ಮಾಡಿದರೆ ಮಹಿಳೆಯರು ಕೃಷಿಯಲ್ಲಿ ಅಭೂತಪೂರ್ವ ಯಶಸ್ಸು ಕಾಣಬಹುದು ಎಂಬುದಕ್ಕೆ ಶ್ರೀಮತಿ ಅನ್ನಪೂರ್ಣ ಅವರ ಕೃಷಿ ಆಸಕ್ತಿಯ ಲೇಖನವು ರೈತ ಮಹಿಳೆಯರಿಗೆ ಮಾದರಿಯಾದರೆ ದೇವದಾಸಿ ಪದ್ಧತಿಯಿಂದ ಹೊರಬಂದು ಕೃಷಿಯಲ್ಲಿ ಸ್ವಾವಲಂಬಿಯಾಗಿರುವ ಈಶ್ವರಮ್ಮ ಅವರ ಸಾಧನೆ ನಾಗರೀಕ ಸಮಾಜದ ಸಾಕ್ಷಿಪ್ರಜ್ಞೆಯಾಗಿ ನಮ್ಮನ್ನು ಕಾಡುತ್ತದೆ.

ಹಲವಾರು ಜವಾರಿ ಬೀಜಗಳನ್ನು ಜತನದಿಂದ ಕಾಪಾಡಿ ಅವುಗಳ ಪ್ರಾಮುಖ್ಯತೆಯನ್ನು ಸಮಾಜಕ್ಕೆ ಸಾರುತ್ತಿರುವ ಕಲ್ಲಪ್ಪ ಅವರ ಸಾದನೆಯನ್ನು ಅಕ್ಷರ ರೂಪದಲ್ಲಿ ಬಿಂಬಿಸಿರುವ ಪರಿಯಂತೂ ಅನನ್ಯ. ಇದೆಲ್ಲದರ ಜೊತೆಗೆ ವಿಜಯನಗರದ ವಿಶಿಷ್ಟ ಬಾಳೆ ತಳಿಗಳು, ವಿಜಯನಗರ ಕಾಲದ ಕೃಷಿ ನೋಟ, ಸಿರಿಧಾನ್ಯ ಮತ್ತು ಅಕ್ಕಡಿ ಬೆಳೆಗಳು, ದೇಸಿ ಬೀಜಗಳು ಮತ್ತು ಅವುಗಳ ಸಂರಕ್ಷಣೆ ಕುರಿತಾದ ಲೇಖನಗಳು ಕೃಷಿಯಲ್ಲಿ ಅಂಬೆಗಾಲಿಡುತ್ತಿರುವವರಿಗೆ ಮಾರ್ಗದರ್ಶಿಯಾಗಿವೆ. ಕೃಷಿಯಲ್ಲಿ ಹೊಸ ಹೊಳಹನ್ನು ಸೃಷ್ಟಿಸುತ್ತವೆ.

ಪುಸ್ತಕ ಓದುತ್ತಾ ಹೋದಂತೆಲ್ಲಾ ಕೃಷಿ ಹೇಗೆ ನಿತ್ಯ ಜೀವನದಲ್ಲಿ ನಮ್ಮ ಉಸಿರಾಗಬೇಕು ಎಂಬ ಚಿಂತನೆಗೆ ಓದುಗರನ್ನು ಹಚ್ಚುತ್ತವೆ. ಕೂಡು ಕುಟುಂಬದ ಕೃಷಿಯು ಹೇಗೆ ಸಂತಸದಾಯಕ ಮತ್ತು ಆರ್ಥಿಕದಾಯಕವಾಗಬಲ್ಲದು ಎಂಬುದಕ್ಕೆ ಈ ಲೇಖನಗಳು ಜ್ವಲಂತ ಉದಾಹರಣೆಗಳಾಗಿವೆ. ಪರಂಪರಾಗತ ಕೃಷಿಯಿಂದ ಹಿಡಿದು ಆಧುನಿಕ ಕೃಷಿಯವರೆಗೆ ರೈತರು ಅಳವಡಿಸಿಕೊಳ್ಳಬಹುದಾದ ಅನೇಕ ತಂತ್ರಜ್ಞಾನಗಳು ಮತ್ತು ಅದರಿಂದ ದೊರೆಯುವ ಪ್ರಯೋಜನಗಳು ಮನಸೆಳೆಯುತ್ತವೆ.

ಸಾಂಪ್ರದಾಯಿಕ ಕೃಷಿ ಪದ್ಧತಿಗಳು ಯಾವುದೇ ಕಾರ್ಪೊರೇಟ್ ಉದ್ಯೋಗಗಳಿಗಿಂತ ಹೆಚ್ಚು ಆದಾಯವನ್ನು ನೀಡುವುದರ ಜೊತೆಗೆ ರೈತನನ್ನು ಹೇಗೆ ಸ್ವಾವಲಂಬಿ ಮಾಡಬಹುದು ಎನ್ನುವುದರ ಸಂಪೂರ್ಣ ಚಿತ್ರಣ ನಮಗೆ ಈ ಲೇಖನಗಳನ್ನು ಓದಿದಾಗ ಕಣ್ಣಿಗೆ ಕಟ್ಟುತ್ತವೆ. ಶ್ರಮಪಡದೆ ಕೇವಲ ಬಾಯಿಮಾತಿನಲ್ಲಿ ಕೃಷಿಯೆಂದರೆ ನಷ್ಟದ ಬಾಬತ್ತು ಎಂದು ಸದಾ ಹಳಹಳಿಸುವ ಹಲವು ಮನೋರೋಗಿಗಳಿಗೆ ಈ ಸಾಧಕರ ಸಾಧನೆಗಳು ಸೂಕ್ತ ಚಿಕಿತ್ಸೆ ನೀಡುತ್ತವೆ.

ವಿಜಯನಗರ ಜಿಲ್ಲೆಯಲ್ಲಿ ಇರುವ ಅಸಂಖ್ಯ ಕೃಷಿಸಾಧಕರ ನಡುವೆ ಮೊದಲ ಕಂತಿನಲ್ಲಿ ಕೆಲವು ಸಾಧಕರ ಶ್ರಮವನ್ನು ಬೆಳಕಿಗೆ ತರುವಲ್ಲಿ ಸಂಪಾದಕರು ಮತ್ತು ಹಸಿರಿನೊಂದಿಗೆ ಮಾತುಕತೆಯ ರೂವಾರಿಯಾದ ಶ್ರೀ ಮಲ್ಲಿಕಾರ್ಜುನ ಹೊಸಪಾಳ್ಯ ಅವರ ಶ್ರಮ ಮತ್ತು ಕಾಳಜಿ ಅಭಿನಂದನಾರ್ಹ..ಅವರಮುಂದಾಳತ್ವದಲ್ಲಿ ಹಸಿರಿನೊಂದಿಗೆ ಮಾತುಕತೆ ಹೆಮ್ಮರವಾಗಿ ಬೆಳೆದು ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚು ಕೃಷಿ ಸಾದಕರು ಅಕ್ಷರ ರೂಪದಲ್ಲಿ ಬೆಳಕಿಗೆ ಬಂದು ಕೃಷಿಯ ಆಗಸದಲ್ಲಿ ಧ್ರುವ ನಕ್ಷತ್ರಗಳಾಗಿ ಮೆರೆಯಲಿ ಎಂದು ಹಾರೈಸುತ್ತೇನೆ.



– ಡಾ. ಪಿ. ಆರ್ ಬದರಿ ಪ್ರಸಾದ್
ಮುಖ್ಯಸ್ಥರು, ಕೃಷಿ ಕೀಟಶಾಸ್ತ್ರ ವಿಭಾಗ
ಕೃಷಿ ಮಹಾವಿದ್ಯಾಲಯ ಗಂಗಾವತಿ

## ಕವಿ ಮನಸು

### ಕನಿಕರಿಸು ಭಗವಂತ



ಕಟ್ಟಿಹರೆ ಅಣೆಕಟ್ಟು ಆಕಾಶದೊಡಲಲ್ಲಿ
ಬಿಟ್ಟಿಹರೆ ಕೆಲವೊಂದು ತೂಬು ತೆಗೆದು
ಕೆಲವೊಂದು ಜಾಗದಲಿ ಅತಿವೃಷ್ಟಿ
ಯಾಗುತಿದೆ
ಸಿಲುಕಿಹರು ಕೆಲಮಂದಿ ಗುಡ್ಡ ಕುಸಿದು

ಭಗವಂತ ಅರಿತಿರುವ ಮಾನವನು ಬಿಡಲಾರ
ಜಲಕಾಗಿ ಅರಸುವನು ಭೂಮಿ ಬಗೆದು
ಬುವಿಯೊಡಲು ಬರಿದಾಗಿ ಕಳೆದಿಹುದ
ತುಂಬಿಸಲು
ಭೂಮಾತೆ ಕೇಳಿದಳೆ ಹರಿಯ ನೆನೆದು

ನದಿ ನೀರು ಗಡಿದಾಟಿ ನೆರೆಯಾಗಿ
ಪರಿಣಮಿಸಿ
ತೆಗೆಯುತಿದೆ ನೆಲ ಬೆಳೆಯ ಆಪೋಶನ
ಭಗವಂತ ಕನಿಕರಿಸು ಹಿತವಾಗಿ ನೀ ಸುರಿಸು
ತೊಡಕಿರದೆ ನಡೆದಿರಲಿ ಜನಜೀವನ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಭಾಸ್ಕರ

ಉದಯ ವಾಗುತ್ತಿಹದು
ಬಾನಿನಿಂದ ಭಾಸ್ಕರ.
ಹೊನ್ನ ಕಿರಣ ಜಗಕ್ಕೆ ಚೆಲ್ಲಿ
ನಮಗೆಬೆಳಕುಕೊಡುವನು .1

ಹಕ್ಕಿಎಲ್ಲಾ ಗೂಡಿನಿಂದ
ಹೊರಕ್ಕೆ ಹಾರಿ ಬರುವವು.
ದುಂಬಿಗಳು ಮಧುವ ಹೀರಲು.
ಜಯಂಕಾರ ನಾದದಿ ಮೊಳಗಿಹವು .2

ಜುಳುಜುಳು ಹರಿಯುವ
ನೀರಿನ ಚಿತ್ತಾರ.
ತಂಪು ಗಾಳಿ ಬೀಸಿ.
ಆನಂದ ಸೂಸುವದು .3

ಮರದ ಮೇಲೆ ಕುಳಿತುಕೊಂಡು.
ಕೋಗಿಲೆಯು ಕುಗುವದು.
ನವಿಲೊಂದು ಹಾರಿಬಂದು
ಹೆಜ್ಜೆ ತಾಳ ಹಾಕುವದು .4

ಪುಟ್ಟ ಮೊಲಾ ಕುಳಿತುಕೊಂಡು
ಕಣ್ಣು ಹೇಗೆ ಬಿಡುವದು. ಕವಿ
ಓರ್ವನು ರಚಿಸ.ಬಲ್ಲನು
ಸೃಷ್ಟಿಯ ಸೊಬಗು ರಮ್ಯಾ ವ.5

– ಎಸ್.ಎಸ್. ಮುದ್ಲಾಪುರ ಕೊಪ್ಪಳ

### ಮಳೆ ನಿಂತು ಹೋದ ಮೇಲೆ

ಮಳೆ ನಿಂತು ಹೋದ ಮೇಲೆ
ಎಲೆಗಳ ತುಂಬಾ ಮುತ್ತಿನ ಮಾಲೆ
ಇಳೆಯ ತುಂಬ ಇಬ್ಬನಿಯ ಓಲೆ
ಸುತ್ತ ಹಣೆದಿದೆ ಜೇಡರ ಬಲೆ

ಅಪ್ಪಳಿಸಿದ ಗಾಳಿಯ ಅಲೆ
ಉದುರಿದೆ ಮರದ ಎಲೆ
ಜೀವನವಾಗಿದೆ ತೂಗುಯ್ಯಾಲೆ
ಇಲ್ಲದಾಗಿದೆ ಜೀವ ನೆಲೆ

ಬೆಟ್ಟಗುಡ್ಡಗಳು ಕುಸಿಯುತ್ತಿದೆ
ಜನಜೀವನ ಅಸ್ತವ್ಯಸ್ತವಾಗಿದೆ
ಜೀವಕ್ಕೆ ಇಲ್ಲ ಬೆಲೆ
ಅರಿತವರ್ಯಾರು ಪ್ರಕೃತಿಯ ಲೀಲೆ

– ಚೇತನ ಭಾರ್ಗವ ಬೆಂಗಳೂರು




# ಮುಸ್ಲೀಮರಿಲ್ಲದ ಮೊಹರಂ ಏನಿದರ ಕುರುಹು?

■ **ಅರುಣ್ ಜೋಳದ** ಕೂಡ್ಲಿಗಿ



ಕರ್ನಾಟಕದ ಸಾವಿರಾರು ಊರುಗಳಲ್ಲಿ ಮುಸ್ಲೀಮರು ಇಲ್ಲದೆಯೂ ಮೊಹರಂ ಅದ್ದೂರಿಯಾಗಿ ನಡೆಯುತ್ತದೆ. ಇದನ್ನು ವಿಶಿಷ್ಟವೆಂತಲೂ, ಹಿಂದೂ ಮುಸ್ಲಿಂ ಸಾಮರಸ್ಯವೆಂತಲೂ, ಭಾವೈಕ್ಯದ ಕುರುಹು ಎಂತಲೂ ಮಾಧ್ಯಮಗಳು ಅಚ್ಚರಿಯೊಂದಿಗೆ ವರದಿ ಮಾಡುತ್ತವೆ. ಹಿಂದುಗಳೆ ಮುಸ್ಲೀಮರ ಮೊಹರಂ ಹಬ್ಬವನ್ನು ಆಚರಿಸುವ ಬಗ್ಗೆ ಕೌತುಕ ವ್ಯಕ್ತಪಡಿಸುತ್ತವೆ. ಅಂತೆಯೇ ಕರ್ನಾಟಕದಲ್ಲಿ ಮೊಹರಂ ಆಚರಣೆ ನಡೆಯದ ನೂರಾರು ಹಳ್ಳಿಗಳೂ ಇವೆ. ಇಂತಹ ಕಡೆಗಳಲ್ಲಿ ಮೊಹರಂ ಏಕೆ ಇಲ್ಲ ಎಂದು ಕೇಳಿದರೆ, ನಮ್ಮೂರಲ್ಲಿ ಮೊದಲಿನಿಂದಲೂ ಮುಸ್ಲೀಮರಿಲ್ಲ ಎನ್ನುತ್ತಾರೆ. ಹಾಗೆ ನೋಡಿದರೆ ಈ ಕೆಲವು ಹಳ್ಳಿಗಳಲ್ಲಿ ಮುಸ್ಲೀಮರು ಬೇರೆಡೆ ವಲಸೆ ಹೋದ ಕಾರಣ ಹಿಂದೂಗಳು ಮೊಹರಂ ಹಬ್ಬವನ್ನು ನಿಲ್ಲಿಸಿರಬಹುದು. ಅಥವಾ ಎರಡೂ ಧರ್ಮಗಳ ಮೂಲಭೂತವಾದಿ ಸಂಘಟನೆಗಳು ಇಂತಹ ಸಾಮರಸ್ಯದ ಆಚರಣೆ ನಡೆಯದಂತೆ ತಡೆದಿರಬಹುದು.

ಮೊಹರಂ ಚರಿತ್ರೆ ಏಳನೆ ಶತಮಾನಕ್ಕೆ ಕೊಂಡೊಯ್ಯುತ್ತದೆ. ಮಹಮದ್ ಪೈಗಂಬರನ ಮೊಮ್ಮಕ್ಕಳಾದ ಹಸನ್–ಹುಸೇನ್ ವಂಶಸ್ಥರು ಮತ್ತು ದಾಯಾದಿ ಯಾಜೀದನ ವಂಶಸ್ಥರ ನಡುವೆ ಕರ್ಬಲಾ ಮೈದಾನದಲ್ಲಿ ನಡೆದ ಯುದ್ಧದಲ್ಲಿ ಸಾವನ್ನಪ್ಪುವ ಧಾರುಣ ಘಟನೆಯನ್ನು ನೆನಪಿಸಿಕೊಳ್ಳುವ ಆಚರಣೆ. ಮುಸ್ಲಿಂ ಧರ್ಮದ ಎರಡು ಪ್ರಧಾನ ಪಂಗಡಗಳಾದ ಶಿಯಾ–ಸುನ್ನಿಗಳು ಈ ಆಚರಣೆಯನ್ನು ಭಿನ್ನವಾಗಿ ಆಚರಿಸುತ್ತಾರೆ. ಇದು ಉತ್ತರ ಕರ್ನಾಟಕದಲ್ಲಿ ಬಹಮನಿ–ಆದಿಲ್‌ಶಾಹಿಗಳ ಕಾಲದಿಂದಲೂ ನಡೆದುಕೊಂಡು ಬಂದಿದೆ. ಹೈದರಾಬಾದ ನಿಜಾಮನ ಕಾಲದಲ್ಲಿಯೂ ಮೊಹರಂ ಆಚರಣೆ ಈ ಭಾಗದಲ್ಲಿ ವ್ಯಾಪಕವಾಗಿದೆ. ಹೀಗೆ ಮುಸ್ಲೀಂ ಆಡಳಿತದ ಪರಿಣಾಮ ಉತ್ತರ ಕರ್ನಾಟಕದಲ್ಲಿ ಮೊಹರಂ ಹಲವು ಹೆಸರುಗಳಲ್ಲಿ ಊರಬ್ಬವಾಗಿ ರಂಗುರಂಗಾಗಿ ಆಚರಣೆಗೊಳ್ಳುತ್ತದೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಬೈಕನವಾಡಿಯಲ್ಲಿ ಒಂದೇ ಒಂದು ಮುಸ್ಲೀಂ ಕುಟುಂಬವಿಲ್ಲ ಆದರೂ ಮೊಹರಂ ಅದ್ದೂರಿಯಾಗಿ ಜರುಗುತ್ತದೆ. ಮುರಸಿದ್ಧೇಶ್ವರ ಮತ್ತು ಮಹಾದೇವ ದೇವಸ್ಥಾನಗಳಲ್ಲಿ ಮೊಹರಂ ದೇವರ ಪಂಜಾಗಳನ್ನು ಕೂರಿಸುತ್ತಾರೆ. ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲೂಕಿನ ಬಳ್ಳಾಪುರ, ಜೀರಿಗನೂರು, ಕಣ್ವಿ ತಿಮ್ಮಲಾಪುರ, ಕಲಘಟಗಿ ತಾಲೂಕಿನ ಕೆ.ಹುಣಶಿಕಟ್ಟಿ, ಚಿತ್ರದುರ್ಗ ತಾಲೂಕಿನ ಬಚ್ಚಬೋರನಹಟ್ಟಿ, ಬಳ್ಳಾರಿ ಜಿಲ್ಲೆ ಕುರುಗೋಡು ತಾಲೂಕಿನ ಮುಷ್ಟಗಟ್ಟೆ, ಸವದತ್ತಿ ತಾಲೂಕಿನ ಹರ್ಲಾಪುರ, ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ವಗಡಂಬಳಿ, ಹೂವಿನಹಡಗಲಿ ಸಮೀಪದ ಶಿವಪುರ, ಹಾಳ ತಿಮ್ಮಾಪುರ, ಬ್ಯಾಲಹುಣಸಿ, ಹೀಗೆ ಸುದ್ದಿಯಾದ ಮತ್ತು ನಾನು ಕ್ಷೇತ್ರಕಾರ್ಯದಲ್ಲಿ ಗುರುತಿಸಿದ ಹಳ್ಳಿಗಳ ಹೊರತಾಗಿಯೂ ಸಾವಿರಾರು ಹಳ್ಳಿಗಳಲ್ಲಿ ಮುಸ್ಲೀಮರಿಲ್ಲದ ಮೊಹರಂ ನಡೆಯುತ್ತದೆ. ಕೆಲವು ಹಳ್ಳಿಗಳಲ್ಲಿ ಮೊಹರಂ ದೇವರು ಕೂರಿಸುವ ಮಸೀದಿಗಳೂ ಇಲ್ಲ. ದೇವಸ್ಥಾನಗಳಲ್ಲೆ ದೇವರನ್ನು ಕೂರಿಸಲಾಗುತ್ತದೆ. ಬ್ಯಾಲಹುಣಸಿ ಗ್ರಾಮದಲ್ಲಿ ಬಸವೇಶ್ವರ ದೇವಸ್ಥಾನದ ಕಟ್ಟೆಯ ಮೇಲೆ ಮೊಹರಂ ದೇವರನ್ನು ಕೂರಿಸುತ್ತಾರೆ.

ಇಂತಹ ಕಡೆಗಳಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಿದರೆ ಕೆಲವು ಹಳ್ಳಿಗಳಲ್ಲಿ ಬಹಳ ಕಾಲದ ಹಿಂದೆ ಮುಸ್ಲೀಮರು ನೆಲೆಸಿದ್ದ ಕುರುಹು ಸಿಗುತ್ತದೆ. ಶಿಗ್ಗಾವಿ ತಾಲೂಕಿನ ಹುಲಿಕಟ್ಟಿ ಗ್ರಾಮದಲ್ಲಿ ಪ್ಲೇಗ್ ಬಂದಾಗ ಮುಸ್ಲೀಮರು ಗ್ರಾಮ ತೊರೆದಿದ್ದಾರೆ, ಅವರು ಬಿಟ್ಟು ಹೋದ ಮಸೀದಿಯಲ್ಲಿ ಈಗಲೂ ಹಿಂದೂಗಳು ಮೊಹರಂ ಆಚರಿಸುತ್ತಾರೆ. ಸವದತ್ತಿ ತಾಲೂಕಿನ ಹರ್ಲಾಪುರದಲ್ಲಿ ಬಹಳ ಹಿಂದೆ ಮುಸ್ಲೀಂ ಸಮುದಾಯದ ಸೂಫಿ ಫಕೀರನೊಬ್ಬ ವಾಸವಿದ್ದನಂತೆ, ಹಾಗಾಗಿ ಆತ ತೀರಿದ ಬಳಿಕವೂ ಈ ಊರಲ್ಲಿ ಮೊಹರಂ ಹಬ್ಬವನ್ನು ಆಚರಿಸಲಾಗುತ್ತದೆ. ಹೀಗೆ ಮುಸ್ಲೀಮರಿಲ್ಲದ ಊರುಗಳ ಮೊಹರಂ ಆಚರಣೆಗೆ ಆಯಾ ಭಾಗದ ಸೂಫಿ ಸಂತರ ಪ್ರಭಾವವೂ ಇದೆ. ಕೆಲವು ಕಡೆಗಳಲ್ಲಿ ಮೊಹರಂ ದೇವರುಗಳೆ ಮತ್ತೊಂದು ಊರುಗಳಿಗೆ ವಲಸೆ ಬಂದಿರುವುದಾಗಿಯೂ, ಬಹಳ ಊರುಗಳಲ್ಲಿ ಹಳ್ಳಗಳಲ್ಲಿ ಮೊಹರಂ ದೇವರು ಹರಿದುಬಂದು ಈ ಊರಿನಲ್ಲಿ ನೆಲೆಸಿರುವುದಾಗಿಯೂ ರಿವಾಯ್ತ್ ಪದಗಳಲ್ಲಿ ಹೇಳುತ್ತಾರೆ. ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಬಹುಪಾಲು ಮುಸ್ಲೀಮರಿಲ್ಲದ ಊರುಗಳಲ್ಲಿ ಮೊಹರಂ ನಡೆಯುತ್ತದೆ ಎಂದರೆ ಹಿಂದೆ ಈ ಊರುಗಳಲ್ಲಿ ಮುಸ್ಲೀಮರು ನೆಲೆಸಿದ್ದರು ಎನ್ನುವುದರ ಸಂಕೇತವಾಗಿದೆ. ಅಂತೆಯೆ ಮುಸ್ಲೀಮರಿಲ್ಲದ ಮೊಹರಂ ನಡೆವ ಹಳ್ಳಿಗಳ ಸುತ್ತಮುತ್ತಣ ಮುಸ್ಲೀಮರನ್ನು ಕರೆತಂದು ಹಬ್ಬ ಮಾಡಲಾಗುತ್ತದೆ. ಕೆಲವು ಕಡೆಗಳಲ್ಲಿ ಪೂರ್ವಜರ ನೆನಪಿಗೆ ಬಿಟ್ಟುಹೋದ ಮನೆತನದ ಮುಸ್ಲಿಂ ಕುಟುಂಬಗಳೆ ಮೊಹರಂ ಹಬ್ಬಕ್ಕೆ ಎರಡು ಮೂರು ದಿನದ ಮಟ್ಟಿಗೆ ಬಂದು ಆಚರಣೆ ಮುಗಿಸಿಕೊಂಡು ಹೋಗುತ್ತಾರೆ.

ಇಂತಹ ಮುಸ್ಲೀಮರ ವಲಸೆಯ ಪ್ರಮಾಣ 1992 ರ ಬಾಬರಿ ಮಸೀದಿ ಧ್ವಂಸದ ನಂತರ ಹೆಚ್ಚಾಗಿರುವುದನ್ನು ಗಮನಿಸಬಹುದು. ಮುಸ್ಲೀಮರ ದುರುಳೀಕರಣ, ಮುಸ್ಲೀಮರ ಬಗೆಗೆ ಹುಟ್ಟಿಸಿದ ಭಯದಿಂದ ಭಾರತೀಯ ಮುಸ್ಲೀಮರಲ್ಲಿ ಭಯ ಆತಂಕ ಅಭದ್ರತೆ ನೆಲೆಸಿದೆ. ಹೀಗಾಗಿ ಮುಸ್ಲೀಮರು ಒಗ್ಗಟ್ಟಾಗುವುದು, ಒಂದೆಡೆ ಬದುಕುವುದು ಅನಿವಾರ್ಯವಾಗಿದೆ. ಹಿಂದೆ ಚಿಕ್ಕಪುಟ್ಟ ವ್ಯಾಪಾರಿಗಳಾಗಿ ಊರುಗಳಿಗೆ ಪ್ರವೇಶಿಸಿ ಆಯಗಾರರಾಗಿ ಒಂದೋ ಎರಡೋ ಮುಸ್ಲಿಂ ಮನೆಗಳು ನೆಲೆಸಿದ್ದರು. ಬದಲಾದ ಕೋಮುಭಾವನೆಯ ಪರಿಣಾಮವಾಗಿ ತಮ್ಮ ವಾಸದ ಹಳ್ಳಿಗಳನ್ನು ತೊರೆದು ಎಲ್ಲಿ ಮುಸ್ಲೀಂ ಸಮುದಾಯ ಹೆಚ್ಚಾಗಿ ನೆಲೆಸಿದ್ದಾರೋ ಅಂತಹ ಕಡೆಗಳಿಗೆ ಹೆಚ್ಚಾಗಿ ನಗರಗಳಿಗೆ ವಲಸೆ ಹೋಗಿದ್ದಾರೆ. ಹಾಗಾಗಿ ಮುಸ್ಲಿಮರಿಲ್ಲದ ಮೊಹರಂ ಆಚರಣೆ, ಹಿಂದೆ ಈ ಊರುಗಳಲ್ಲಿ ಮುಸ್ಲೀಮರು ಇದ್ದರು ಎಂದು ಹೇಳುವ ಮೌಖಿಕ ಚರಿತ್ರೆಯ ಪಠ್ಯಗಳಾಗಿವೆ.

# ವಿಜಯನಗರ ಕಾಲುವೆಗಳಿಗೆ ನೀರು ರೈತರಲ್ಲಿ ಹೆಚ್ಚಿದ ಸಂತಸ

## ಸಂಸದ ಕೆ.ರಾಜಶೇಖರ ಹಿಟ್ನಾಳ ಸ್ಟಾಟರ್ ಬಟನ್ ಮೂಲಕ ಚಾಲನೆ



■ **ಹಂಪಿ ಟೈಮ್ಸ್ ಕೊಪ್ಪಳ**

ವಿಜಯನಗರ ಕಾಲುವೆಗಳಿಗೆ ಜುಲೈ 19ರಿಂದ ತುಂಗಭದ್ರಾ ನೀರು ಹರಿಸುವುದಕ್ಕೆ ಸಂಸದರಾದ ಕೆ. ರಾಜಶೇಖರ ಹಿಟ್ನಾಳ ಅವರು ಜು.19ರಂದು ಸ್ಟಾಟರ್ ಬಟನ್ ಒತ್ತುವುದರ ಮೂಲಕ ಚಾಲನೆ ನೀಡಿದರು.

ನೀರು ಬಿಡುಗಡೆ ಹಿನ್ನೆಲೆಯಲ್ಲಿ ತುಂಗಭದ್ರಾ ಜಲಾಶಯದ ಆಣೆಕಟ್ಟಿನ ಮೇಲಿನ ಎಡದಂಡೆ ಮುಖ್ಯ ಕಾಲುವೆಯ 9 & 10 ನೀರಾವರಿ ಗೇಟಿನ ಸ್ಟಾಟರ್ ಬಳಿಯಲ್ಲಿ ಬೆಳಗ್ಗೆ ಹಬ್ಬದ ಸಂಭ್ರಮ ಕಂಡುಬಂದಿತು. ತಳಿರುತೋರಣಗಳಿಂದಯಂತ್ರವನ್ನುಶೃಂಗರಿಸಲಾಗಿತ್ತು.

ಪಕ್ಷದ ಮುಖಂಡರು, ಮುನಿರಾಬಾದ್ ಗ್ರಾಮದ ಗ್ರಾಮ ಪಂಚಾಯತ್ ಸದಸ್ಯರು, ಭಾರಿ ನೀರಾವರಿ ನಿಗಮ ನಿಯಮಿತದ ಅಧಿಕಾರಿಗಳ ಸಮ್ಮುಖದಲ್ಲಿ ಸಂಸದರು, ಡ್ಯಾಮ್ ನೀರು ಬಿಡುಗಡೆಗೆ ವಿದ್ಯುಕ್ತ ಚಾಲನೆ ನೀಡುತ್ತಿದ್ದಂತೆ 'ತುಂಗಭದ್ರಾ ತಾಯಿಗೆ ಜಯವಾಗಲಿ' ಎನ್ನುವ ಘೋಷಣೆಗಳು ಮೊಳಗಿದವು.

ಉತ್ತಮ ಮಳೆಯಿಂದಾಗಿ ದಿನೇದಿನೆ ತುಂಬುತ್ತಿರುವ ತುಂಗಭದ್ರಾ ನೀರು ಕಾಲುವೆಗೆ ಹರಿಯುತ್ತಿದ್ದಂತೆ ಸೇರಿದ್ದ ರೈತರು ಮತ್ತು ವಿವಿಧ ಗ್ರಾಮಸ್ಥರ ಮೊಗದಲ್ಲಿ ಸಂತಷ ಕಂಡುಬಂದಿತು. ನೆರೆದಿದ್ದ ಕೆಲವು ರೈತರು, ಗ್ರಾಮಸ್ಥರು ಕಾಲುವೆಗೆ ಹರಿಯುತ್ತಿದ್ದ ನೀರಿನ ಭೋರ್ಗರೆತದ ದೃಶ್ಯಗಳನ್ನು ಮೊಬೈಲನಲ್ಲಿ ಸೆರೆಹಿಡಿದುಕೊಂಡರು.

ಇದೇ ವೇಳೆ ಸಂಸದರು ಸುದ್ದಿಗಾರರೊಂದಿಗೆ ಮಾತನಾಡಿ, ಮುಂಗಾರು–ಹಂಗಾಮಿನಲ್ಲಿ ಮಳೆ ತೀವ್ರತೆ ಹೆಚ್ಚಾಗಿರುವುದರಿಂದ ಜಲಾನಯನ ಪ್ರದೇಶದಲ್ಲಿ ಒಳಹರಿವು ಹೆಚ್ಚಾಗುತ್ತಿದ್ದು, ಐದಾರು ದಿನಗಳಲ್ಲಿ ಡ್ಯಾಂ ತುಂಬುವ ಸಾಧ್ಯತೆಯಿದೆ. ಭಗವಂತನ ಕೃಪೆಯಿಂದ ಇದೇ ರೀತಿ ಮುಂದುವರಿದರೆ ರೈತರ ಎರಡೂ ಬೆಳೆಗಳಿಗೆ ನೀರು ಸಿಗಲಿದ್ದು, ಇದೊಂದು ಸಂತಸದ ಸಂಗತಿಯಾಗಿದೆ. ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ಹಾಗೂ ವಿವಿಧ ಕಾಲುವೆಗಳಿಗೆ ಜುಲೈ 19ರಿಂದ ನೀರು ಬಿಡಲಾಗಿದೆ. ಉಳಿದಂತೆ ಇತರ ಕಾಲುವೆಗಳಿಗೆ ನಿಗದಿತ ವೇಳಾಪಟ್ಟಿಯಂತೆ ನೀರು ಬಿಡಲಾಗುತ್ತಿದೆ. ಪಾಪಯ್ಯ ಟನಲ್ ಮೂಲಕ ರಾಯಚೂರಿಗೆ ನೀರು ಹೋಗುವ ಕಾಲುವೆ ಗಾತ್ರ ಹೆಚ್ಚಿಸುವ ಕುರಿತಂತೆ ಐಸಿಸಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುನಿರಾಬಾದ ತುಂಗಭದ್ರ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಿದ (ಕಾಡಾ) ಅಧ್ಯಕ್ಷರಾದ ಹಸನ್ ಸಾಬ್ ನಬೀಬ್ ಸಾಬ್ ದೋಟಿಹಾಳ, ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ, ಮುಖಂಡರಾದ ಜನಾರ್ಧನ ಹುಲಗಿ, ಮುನಿರಾಬಾದ್ ತುಂಗಭದ್ರಾ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರರು ಹಾಗೂ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಬಾರಿ ನೀರಾವರಿ ನಿಗಮ ನಿಯಮಿತದ ಅಧೀಕ್ಷಕ ಅಭಿಯಂತರರಾದ

ಎಲ್ ಬಸವರಾಜ್, ತಾಂತ್ರಿಕ ಸಹಾಯಕರಾದ ಬಸಪ್ಪ ಜಾನಕರ, ವಡ್ಡರಹಟ್ಟಿಯ ಅಭಿಯಂತರರಾದ ಎಂ. ಎಸ್.ಗೋಡೇಕರ, ಮುನಿರಾಬಾದ್ ಅಭಿಯಂತರ ಗಿರೀಶ್, ಅಗಳಕೇರಾ ಅಭಿಯಂತರರಾದ ಅಮರೇಶ ಸೇರಿದಂತೆ ಇನ್ನಿತರ ಅಧಿಕಾರಿಗಳು, ಹಲವು ಗಣ್ಯರು, ಜನಪ್ರತಿನಿಧಿಗಳು, ರೈತ ಮುಖಂಡರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ತಾಲ್ಲೂಕಿನ ಕೃಷಿ ಇಲಾಖೆಯಿಂದ 2024–25ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ರೈತಮಹಿಳೆಯರುಪ್ರತ್ಯೇಕಅರ್ಜಿಸಲ್ಲಿಸಬಹುದಾಗಿದೆ. ಕೃಷಿ ಇಲಾಖೆಯ K-Kisan Portal Citizan Login ನಲ್ಲಿ ಸ್ವತಃ ರೈತರೇ ಅರ್ಜಿಯನ್ನು ಸಲ್ಲಿಸಬಹುದು. ಅಥವಾ ಹತ್ತಿರದ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ತಮ್ಮ ಎಫ್.ಐ.ಡಿ ಯನ್ನು ಬಳಸಿಕೊಂಡು ಕೃಷಿ ಪ್ರಶಸ್ತಿ ಯೋಜನೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದು. ಮಳೆಯಾಶ್ರಿತ ಮುಂಗಾರು ಬೆಳೆಗಳಾದ ಶೇಂಗಾ, ನವಣೆ, ಸಜ್ಜೆ, ಪೂರ್ಣ ಬೆಳೆಯ ತೊಗರಿ ಹಾಗೂ ಮುಸುಕಿನ ಜೋಳ, ಈ ಎಲ್ಲಾ ಬೆಳೆಗಳನ್ನು ಮುಂಗಾರು ಹಂಗಾಮಿನಲ್ಲಿ ಆಯ್ಕೆ ಮಾಡಲಾಗಿದೆ. ಅರ್ಜಿ ಸಲ್ಲಿಸಲಿಚ್ಛಿಸುವ ರೈತರು ಕೃಷಿ ಪಂಡಿತ ಪ್ರಶಸ್ತಿಯ ಮುಂಗಾರು ಹಂಗಾಮಿ ಹಿಂಗಾರು ಹಂಗಾಮಿನ ಸ್ಪರ್ಧೆಗೆ ನವೆಂಬರ್ 30 ರೊಳಗಾಗಿ ಸಹಾಯಕ ಕೃಷಿ ನಿರ್ದೇಶಕರು, ಕೊಪ್ಪಳ ಇಲ್ಲಿಗೆ ಅರ್ಜಿ ಸಲ್ಲಿಬೇಕು. ಹೆಚ್ಚಿನ ಮಾಹಿತಿಗಾಗಿ ಹಾಗೂ ಆನ್‌ಲೈನ್ K-Kisan Portal ನಲ್ಲಿ ಅರ್ಜಿ ಸಲ್ಲಿಸಲು ಸಂಪರ್ಕಿಸಿ.



## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**20-07-2024 – ಶನಿವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವಾಷಾಡ |
| ಯೋಗ | : ವೈಧೃತಿ |
| ಕರಣ | : ಗರಜ |
| ಸೂರ್ಯೋದಯ | : 05:53:40 |
| ಸೂರ್ಯಾಸ್ತ | : 19:12:49 |
| ರಾಹು | : 09:13-10:53 |
| ಯಮಘಂಡ | : 14:13-15:53 |
| ಗುಳಿಕ | : 05:54-07:34 |

## ತುಂಗಭದ್ರಾ ನೀರಿನ ಮಟ್ಟ



**ಶುಕ್ರವಾರ : 19-07-2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1618.03 ಅಡಿ |
| ಒಳ ಹರಿವು | 106723 ಕ್ಯುಸೆಕ್ |
| ಹೊರ ಹರಿವು | 404 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 55.972 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1590.87 ಅಡಿ |
| ಒಳ ಹರಿವು | 9849 ಕ್ಯುಸೆಕ್ |
| ಹೊರ ಹರಿವು | 259 ಕ್ಯುಸೆಕ್ |
| ಸಾಮರ್ಥ್ಯ | 11.774 ಟಿಎಂಸಿ |

# ವರ್ಣಭೇದ ಅಭಿವೃದ್ಧಿಗೆ ಮಾರಕ

## ರಾಜ್ಯ ಶಿಕ್ಷಣ ಆಯೋಗದ ಸದಸ್ಯ ಪ್ರೊ. ಸತೀಶ್ ದೇಶಪಾಂಡೆ ಅಭಿಮತ

■ **ಹಂಪಿ ಟೈಮ್ಸ್ ಹೊಸಪೇಟೆ**

ದೇಶ ಇಂದು ಅಭಿವೃದ್ಧಿಯ ಹೊರತಾಗಿ ಕೊಮುವಾರು ವಿಷಯಗಳಿಂದ ಬಳಲುತ್ತಿದೆ. ಈ ಸಮಸ್ಯೆಗಳಿಂದ ಹೊರಬರಲು ಅಭಿವೃದ್ಧಿ ಒಂದೇ ಪರಿಹಾರವಾಗಿದೆ ಎಂದು ದೆಹಲಿ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರು ಹಾಗೂ ರಾಜ್ಯ ಶಿಕ್ಷಣ ಆಯೋಗದ ಸದಸ್ಯರಾದ ಪ್ರೊ. ಸತೀಶ್ ದೇಶಪಾಂಡೆ ಅಭಿಪ್ರಾಯ ವ್ಯಕ್ತಪಡಿಸಿದರು.

ಕನ್ನಡ ವಿಶ್ವವಿದ್ಯಾಲಯದ, ಅಭಿವೃದ್ಧಿ ಅಧ್ಯಯನ ವಿಭಾಗದ ವತಿಯಿಂದ ಪಂಪ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಇತ್ತೀಚಿನ ಅಭಿವೃದ್ಧಿ ಮಾದರಿಗಳು ಮತ್ತು ಸಮಾಜ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತಾನಾಡಿದರು. ಮುಂದುವರೆದು ಅಭಿವೃದ್ಧಿ ಎಂಬುದು ಸಮಾಜದಲ್ಲಿ ವಿವಿಧ ಕಾಲಘಟ್ಟಗಳಲ್ಲಿ ವಿಷಯಗಳು ಬದಲಾದಂತೆ ಅಭಿವೃದ್ಧಿಯ ವ್ಯಾಖ್ಯಾನ ಬದಲಾಗಿದೆ. ಇದಕ್ಕೆ ಪ್ರಾಚೀನ, ಮಧ್ಯಕಾಲ, ಆಧುನಿಕ ಕಾಲದಲ್ಲಿ ಅಭಿವೃದ್ಧಿಯ ಕುರಿತು ಬದಲಾದ ಧೋರಣೆಗಳನ್ನು ಕಾಣಬಹುದು. ಮಾನವ ಅಭಿವೃದ್ಧಿ ಎಂಬ ಕಲ್ಪನೆ ಮೂಡುವುದಕ್ಕಿಂತಲೂ ಆರಂಭದಲ್ಲಿ ಇದ್ದುದು ಕೇವಲ ಆರ್ಥಿಕ ಅಭಿವೃದ್ಧಿ. ಬದಲಾದ ಕಾಲದಲ್ಲಿ ಅಭಿವೃದ್ಧಿ ಎಂದರೆ ಅದು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಮಾನವ ಅಭಿವೃದ್ಧಿ ಎಂಬ ವಿಶಾಲವಾದ ವ್ಯಾಪ್ತಿಯನ್ನು ಆವರಿಸಿಕೊಂಡಿದೆ. ದೇಶ ಸ್ವಾತಂತ್ರ್ಯ ಪಡೆದ ಆರಂಭದ ದಿನಗಳಲ್ಲಿ ಸಮಾಜದಲ್ಲಿದ್ದ ವರ್ಣಭೇದ, ಜಾತಿಯತೆ, ಧರ್ಮ ಗಳಂತಹ ಕಂದಕಗಳಿಗೆ ಅಭಿವೃದ್ಧಿಯೇ ಪರಿಹಾರವಾಗಿತ್ತು. ಆದುದರಿಂದ ನೆಹರೂರವರ ಮೂರು ದಶಕಗಳ ಕಾಲವನ್ನು ಅಭಿವೃದ್ಧಿಯ ಸುವರ್ಣ ಯುಗ ಎಂದು ಕರೆಯಲಾಗಿದೆ. ಆದರೆ ಇಂದು ವರ್ಣಭೇದ ಎಲ್ಲಾ ದೇಶಗಳಲ್ಲಿ ಸಾಮಾನ್ಯವಾಗಿದೆ ಇದು ಸೈದ್ಧಾಂತಿಕವಾಗಿ ಅಭಿವೃದ್ಧಿಗೆ ಮಾರಕವಾದ ವಿಷಯವಾಗಿದೆ ಎಂದರು.



ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಸಚಿವರಾದ ಪ್ರೊ.ವಿಜಯ್ ಪೂಣಚ್ಚ ತಂಬಂಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಕನ್ನಡ ವಿಶ್ವವಿದ್ಯಾಲಯವು ಬೌದ್ಧಿಕವಾಗಿ ಇತರೆ ವಿಶ್ವವಿದ್ಯಾಲಯಗಳಿಗಿಂತ ಮುಂದಿದೆ. ಇಲ್ಲಿನ ಸಂಶೋಧನಾರ್ಥಿಗಳು ಅತ್ಯುತ್ತಮವಾದ ವಿಷಯ ಮಂಡನೆಯಲ್ಲಿ ಹಿಂದೆ ಬಿದ್ದಿಲ್ಲ ಎಂದರು.

ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಗೀತಮ್ಮ ಅವರು ನಿರೂಪಿಸಿದರು. ಈ ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಮುಖ್ಯಸ್ಥರು ಅಧ್ಯಾಪಕರು ಸಿಬ್ಬಂದಿಗಳು ಸಂಶೋಧಾನಾರ್ಥಿಗಳು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಅವೈಜ್ಞಾನಿಕ ರಸ್ತೆ ಹಂಪ್ಸ್ ತೆರವುಗೊಳಿಸಿ ಸುರಕ್ಷಿತ ಸಂಚಾರಕ್ಕೆ ಅವಕಾಶ ಕಲ್ಪಿಸಿ

## ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಡಿಸಿ ನಲಿನ್ ಅತುಲ್ ಸೂಚನೆ

■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯಲ್ಲಿನ ರಸ್ತೆಗಳಲ್ಲಿ ನಿರ್ಮಿಸಿರುವ ಅವೈಜ್ಞಾನಿಕ ಹಂಪ್‌ಗಳಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಮೊದಲು ಅವುಗಳನ್ನು ತೆರವುಗೊಳಿಸಲು ಕ್ರಮ ವಹಿಸಿ ಸಾರ್ವಜನಿಕರ ಸುರಕ್ಷಿತ ಸಂಚಾರಕ್ಕೆ ಅವಕಾಶ ಕಲ್ಪಿಸಿ ಎಂದು ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಶುಕ್ರವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಹಾಗೂ ನಗರದ ಪ್ರಮುಖ ರಸ್ತೆಗಳಲ್ಲಿ ಅವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ನಿರ್ಮಿಸಲಾಗಿದೆ. ಇದರಿಂದ ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆಯಾಗುವುದರ ಜೊತೆಗೆ ಕೆಲವು ಕಡೆಗಳಲ್ಲಿ ಅಪಘಾತಗಳೂ ಸಂಭವಿಸುತ್ತವೆ. ಆದ್ದರಿಂದ ಅಂತಹ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆರವುಗೊಳಿಸಿ, ಅದಕ್ಕೆ ಪರ್ಯಾಯವಾಗಿ ವಾಹನಗಳ ವೇಗವನ್ನು ನಿಯಂತ್ರಿಸಲು ಹಾಗೂ ಅಪಘಾತಗಳನ್ನು ತಪ್ಪಿಸಲು ಬ್ಯಾರಿಕೇಡ್‌ಗಳನ್ನು ಅಳವಡಿಸಿ. ಅಗತ್ಯವಿದ್ದಲ್ಲಿ ರಸ್ತೆಯ ವಿನ್ಯಾಸಕ್ಕೆ ಅನುಗುಣವಾಗಿ ರಸ್ತೆ ಉಬ್ಬುಗಳನ್ನು ವೈಜ್ಞಾನಿಕವಾಗಿ ನಿರ್ಮಿಸಿ ಎಂದು ಅವರು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಹೆಚ್ಚಿನ ಅಪಘಾತಗಳು ಸಂಭವಿಸುವ ಪ್ರಮುಖ ಅಪಘಾತ ವಲಯಗಳನ್ನು ಗುರುತಿಸಿ. ಅಪಘಾತಗಳನ್ನು ತಪ್ಪಿಸಲು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನು ಹಾಗೂ ಪರಿಹಾರ ಕ್ರಮಗಳನ್ನು ಕೈಗೊಂಡು, ಅಪಘಾತಗಳು ಸಂಭವಿಸದಂತೆ ಎಚ್ಚರ ವಹಿಸಿ. ನಗರ ಪ್ರದೇಶದಲ್ಲಿ ಲಾರಿಗಳಂತಹ ವಾಹನ ಸಂಚಾರಕ್ಕೆ ನಿರ್ದಿಷ್ಟ ಸಮಯವನ್ನು ನಿಗದಿಪಡಿಸಿ ಅನಗತ್ಯ ಸಂಚಾರ ದಟ್ಟನೆ ತಪ್ಪಿಸಿ. ಗಂಗಾವತಿ ಮತ್ತು ಕೊಪ್ಪಳ ನಗರಸಭೆ ವ್ಯಾಪ್ತಿಯಲ್ಲಿ ಪಾರ್ಕಿಂಗ್ ವ್ಯವಸ್ಥೆ ಗಂಭೀರ ಸಮಸ್ಯೆಯಾಗಿದ್ದು, ಇದಕ್ಕಾಗಿ ಪೊಲೀಸ್ ಇಲಾಖೆಯೊಂದಿಗೆ ನಗರಸಭೆ ಆಯುಕ್ತರು ಚರ್ಚಿಸಿ ಸೂಕ್ತ ಪಾರ್ಕಿಂಗ್ ಸ್ಥಳಗಳನ್ನು ಗುರುತಿಸಿ ಅಗತ್ಯ ವ್ಯವಸ್ಥೆಗೆ ಕ್ರಮ ಕೈಗೊಳ್ಳಬೇಕು. ಪ್ರಮುಖ ಹಾಗೂ ಜನನಿಬಿಡ ರಸ್ತೆಗಳಲ್ಲಿ ತಳ್ಳುಗಾಡಿಗಳನ್ನು, ಬೀದಿ ಬದಿ ವ್ಯಾಪಾರಿಗಳನ್ನು ನಿಯಂತ್ರಿಸಬೇಕು. ಬೀದಿ ಬದಿ ವ್ಯಾಪಾರಕ್ಕಾಗಿ ನಿರ್ದಿಷ್ಟ ಸ್ಥಳ ಗುರುತಿಸಿ ಅವರನ್ನು ಸ್ಥಳಾಂತರಿಸಬೇಕು. ಈ ಬಗ್ಗೆ ಬೀದಿ ಬದಿ ವ್ಯಾಪಾರಿಗಳೊಂದಿಗೆ ಸಭೆ ನಡೆಸಿ ಸೂಕ್ತ ತಿಳುವಳಿಕೆ ನೀಡಿ ಎಂದು ಅವರು ಇಲಾಖಾ ಅಧಿಕಾರಿಗಳಿಗೆ ತಿಳಿಸಿದರು.



> ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತಾ ನಿಯಮಗಳು, ವಾಹನ ಸಂಚಾರ ಕಾನೂನುಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಪ್ರತಿ ಶಾಲಾ-ಕಾಲೇಜು ವಾಹನಗಳಿಗೆ ಜಿಪಿಎಸ್ ಅನ್ನು ಕಡ್ಡಾಯವಾಗಿ ಅಳವಡಿಸಬೇಕು. ಈ ಬಗ್ಗೆ ಸಂಬಂಧಿಸಿದ ಶಾಲಾ-ಕಾಲೇಜುಗಳಿಗೆ ಅಗತ್ಯ ನಿರ್ದೇಶನ ನೀಡಬೇಕು. ಅಪ್ರಾಪ್ತ ವಯಸ್ಸಿನ ಮಕ್ಕಳು ವಾಹನ ಚಾಲನೆ ಮಾಡದಂತೆ ಪಾಲಕರು ಎಚ್ಚರಿಕೆ ವಹಿಸಬೇಕು. ಒಂದು ವೇಳೆ ಅಪ್ರಾಪ್ತರು ವಾಹನ ಚಾಲನೆ ಮಾಡುವುದು ಕಂಡುಬಂದಲ್ಲಿ ವಾಹನ ವಶಕ್ಕೆ ಪಡೆದು ಪಾಲಕರ ಚಾಲನಾ ಪರವಾನಿಗೆ ರದ್ದುಪಡಿಸಿ, ಸರ್ಕಾರದ ನಿಗದಿಪಡಿಸಿದ ದಂಡವನ್ನು ವಸೂಲಿ ಮಾಡಬೇಕು. ನಗರ ಪ್ರದೇಶದಲ್ಲಿ ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಹಾಗೂ ನಾಲ್ಕು ಚಕ್ರ ವಾಹನ ಸವಾರರು ಸೀಟ್ ಬೆಲ್ಟ್ ಕಡ್ಡಾಯಗೊಳಿಸಬೇಕು. ಅತಿ ವೇಗದ, ಕರ್ಕಶ ಶಬ್ದ ಉಂಟುಮಾಡುವ ವಾಹನಗಳನ್ನು ವಶಕ್ಕೆ ಪಡೆಯಬೇಕು. ಈ ಬಗ್ಗೆ ಪೊಲೀಸ್ ಇಲಾಖೆಯೊಂದಿಗೆ ಸಾರಿಗೆ ಇಲಾಖೆಯು ಜಂಟಿಯಾಗಿ ಕಾರ್ಯನಿರ್ವ ಹಿಸಬೇಕು.
>
> **– ನಲಿನ್ ಅತುಲ್**
> ಜಿಲ್ಲಾಧಿಕಾರಿ, ಕೊಪ್ಪಳ

ಜಿಲ್ಲೆಯ ಎಲ್ಲ ಟೋಲ್‌ಗೇಟ್‌ಗಳಲ್ಲಿ ನಿರ್ಮಿಸಿದ ಎಲ್ಲ ಲೇನ್‌ಗಳು ಸಂಪೂರ್ಣವಾಗಿ ಚಿತ್ರೀಕರಣಗೊಳ್ಳುವಂತೆ ಕ್ಯಾಮೆರಾಗಳನ್ನು ಅಳವಡಿಸಬೇಕು. ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಅಲ್ಲಲ್ಲಿ ವಾಹನಗಳ ವೇಗ ತಿಳಿಯುವ ಸ್ಪೀಡ್‌ಗನ್, ರಸ್ತೆ ದೀಪಗಳು, ಸಿಸಿ ಕ್ಯಾಮೆರಾವನ್ನು ಸಂಬಂಧಿಸಿದ ಪ್ರಾಧಿಕಾರಗಳು ಅಳವಡಿಸಬೇಕು. ನಗರ ಪ್ರದೇಶಗಳಲ್ಲಿ ತಳ್ಳುಗಾಡಿಗಳು, ಗೂಡಂಗಡಿಗಳ ಮೂಲಕ ಸಂಚಾರಕ್ಕೆ ಅಡ್ಡಿಪಡಿಸುವ ಫುಟ್‌ಪಾತ್‌ಗಳನ್ನು ತೆರವುಗೊಳಿಸಬೇಕು. ಮುಖ್ಯ ರಸ್ತೆಯಲ್ಲಿ ಬಿಡಾಡಿ ದನಗಳಿಂದ ಉಂಟಾಗುವ ಅಪಘಾತಗಳನ್ನು ತಪ್ಪಿಸಲು ದನಗಳನ್ನು ಗೋಶಾಲೆಗೆ ಸ್ಥಳಾಂತರಿಸಬೇಕು. ಗ್ರಾಮಗಳಿಂದ ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ಹೆಚ್ಚಿನ ಅಪಘಾತಗಳು ಸಂಭವಿಸುತ್ತವೆ. ಅಂತಹ ಸ್ಥಳಗಳನ್ನು ಗುರುತಿಸಿ ಸೂಕ್ತ ಪರಿಹಾರ ಕ್ರಮ ಕೈಗೊಳ್ಳಿ. ರಸ್ತೆಗಳ ಪ್ರಮುಖ ತಿರುವುಗಳು, ಸಂಪರ್ಕ ರಸ್ತೆಗಳಲ್ಲಿ ಸೂಚನಾ ಫಲಕಗಳನ್ನು ಕಡ್ಡಾಯವಾಗಿ ಅಳವಡಿಸಿ ಎಂದು ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮ್ ಅರಸಿದ್ದಿ ಅವರು ಮಾತನಾಡಿ, ನಗರ ಪ್ರದೇಶದಲ್ಲಿ ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುತ್ತಿದ್ದು, ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಹಾಗೂ ಕಾರು ಚಾಲಕರಿಗೆ ಸೀಟ್ ಬೆಲ್ಟ್ ಕಡ್ಡಾಯಗೊಳಿಸಿದೆ. ಜೊತೆಗೆ ನಿರಂತರವಾಗಿ ಚಾಲನಾ ಪರವಾನಗಿ ಪರಿಶೀಲಿಸಿ, ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ದಂಡ ವಸೂಲಿ ಮಾಡಲಾಗುತ್ತಿದೆ. ಅದರಂತೆ ಜಿಲ್ಲೆಯ ಪ್ರಮುಖ ರಸ್ತೆಗಳಲ್ಲಿ ಪಾರ್ಕಿಂಗ್ ಅವ್ಯವಸ್ಥೆ ಕುರಿತು ಕ್ರಮ ಕೈಗೊಂಡು ವ್ಯವಸ್ಥಿತ ಪಾರ್ಕಿಂಗ್‌ಗೆ ನಗರಸಭೆ ಆಯುಕ್ತರೊಂದಿಗೆ ಚರ್ಚಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಹೆಚ್ಚುವರಿ ಎಸ್‌ಪಿ ಹೇಮಂತಕುಮಾರ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರೇಷ್ಮಾ ಹಾನಗಲ್, ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರರಾದ ಹೇಮಂತರಾಜು, ಪ್ರಾದೇಶಿಕ ಸಾರಿಗೆ ಅಧಿಕಾರಿ ಎಲ್.ಬಿ.ನಾಲವಾರ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ವಾಹನಗಳು ಪರ್ಯಾಯ ಮಾರ್ಗದಲ್ಲಿ ಸಂಚರಿಸುವಂತೆ ಸೂಚನೆ

**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಸುಧಾ ಕ್ರಾಸ್ ವೃತ್ತ ಹತ್ತಿರದ ರೈಲ್ವೆ ಗೇಟ್‌ನ ರಸ್ತೆ ಬದಿ ಬೆಳೆದಿರುವ ಗಿಡ-ಮರ ಮತ್ತು ವಿದ್ಯುತ್ ಕಂಬ ತೆರವುಗೊಳಿಸುವ ಕಾರ್ಯ ಹಮ್ಮಿಕೊಂಡಿರುವುದರಿಂದ ಜು.21 ಬೆಳಿಗ್ಗೆ 04 ಗಂಟೆಯಿಂದ ಸಂಜೆ 09 ಗಂಟೆಯವರೆಗೆ ವಾಹನಗಳ ಸಂಚಾರ ತಾತ್ಕಾಲಿಕವಾಗಿ ನಿರ್ಭಂಧಿಸಲಾಗಿದ್ದು, ಬದಲಿ ಮಾರ್ಗವಾಗಿ ಸಂಚರಿಸಬೇಕು ಎಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

**ಬದಲಿ ಮಾರ್ಗ:** ಎಸ್‌ಪಿ (ವಾಲ್ಮೀಕಿ) ವೃತ್ತದಿಂದ ಓಪಿಡಿ ವೃತ್ತ, ಸುಧಾ ಕ್ರಾಸ್ ವೃತ್ತದ ಹತ್ತಿರ ರೈಲ್ವೆ ಗೇಟ್‌ನ ರಸ್ತೆಯ ಮುಖಾಂತರ ಸಂಚರಿಸುವ ಎಲ್ಲಾ ವಾಹನಗಳು ಓಪಿಡಿ ವೃತ್ತ, ಪೋಲಾ ಪ್ಯಾರಡೈಸ್ ಮುಖಾಂತರ ಮತ್ತು 2ನೇ ರೈಲ್ವೆ ಗೇಟ್ ರೇಡಿಯೋ ಪಾರ್ಕ್‌ದಿಂದ ಐಟಿಐ ಕಾಲೇಜು, ಎಂಆರ್‌ಕೆ ಫಂಕ್ಷನ್ ಹಾಲ್, ಆರ್‌ಟಿಓ ಕಚೇರಿ ರಸ್ತೆಯ ಮುಂಭಾಗದಿಂದ ಸುಧಾಕ್ರಾಸ್ (ಹೊಸಪೇಟೆ ರಸ್ತೆ) ಮಾರ್ಗವಾಗಿ ತಾತ್ಕಾಲಿಕವಾಗಿ ಸಂಚರಿಸಬಹುದು.

ಸುಧಾ ಕ್ರಾಸ್ (ಹೊಸಪೇಟೆ ರಸ್ತೆ) ಗೆ ಬರುವ ವಾಹನಗಳನ್ನು ಆರ್‌ಟಿಓ ಕಚೇರಿಯ ರಸ್ತೆ ಮುಖಾಂತರ, 2ನೇ ರೈಲ್ವೆ ಗೇಟ್, 1ನೇ ರೈಲ್ವೆ ಗೇಟ್ ಓವರ್ ಬ್ರಿಡ್ಜ್ ಅಥವಾ ರಂಗಮಂದಿರ ಮುಖಾಂತರ ಸಂಚರಿಸಬಹುದು.

ಮೋಟಾರು ವಾಹನ ಕಾಯ್ದೆ 1988 ರ ಅಧಿನಿಯಮ 115 ರ ಮತ್ತು ಅದರ ಅಡಿ ಬರುವ ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989 ನಿಯಮ 221(ಎ)(5) ರನ್ವಯ ತಾತ್ಕಾಲಿಕವಾಗಿ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

# ಜುಲೈ 20ರಂದು ಕೊಪ್ಪಳದಲ್ಲಿ ವಿದ್ಯುತ್ ಗ್ರಾಹಕರ ಸಭೆ

**ಹಂಪಿ ಟೈಮ್ಸ್ ಕೊಪ್ಪಳ**

ಜೆಸ್ಕಾಂ ಕೊಪ್ಪಳ ಉಪ-ವಿಭಾಗದ ವ್ಯಾಪ್ತಿಯಲ್ಲಿ ಬರುವ ವಿದ್ಯುಚ್ಛಕ್ತಿ ಗ್ರಾಹಕರ ವಿದ್ಯುತ್‌ಶಕ್ತಿಗೆ ಸಂಬಂಧಿಸಿದ ಅಹವಾಲುಗಳು ಮತ್ತು ಕುಂದು ಕೊರತೆಗಳನ್ನು ಪರಿಹರಿಸಲು ಜುಲೈ 20ರಂದು ಬೆಳಿಗ್ಗೆ 11 ಗಂಟೆಗೆ ಗ್ರಾಹಕರ ಅಹವಾಲು ಸ್ವೀಕಾರ ಸಭೆಯನ್ನು ಆಯೋಜಿಸಲಾಗಿದೆ.

ಕೊಪ್ಪಳದ ಕಾರ್ಯ ಮತ್ತು ಪಾಲನಾ ವಿಭಾಗದ ಕಚೇರಿ ಸಭಾಂಗಣದಲ್ಲಿ ನಡೆಯಲಿರುವ ಈ ಸಭೆಗೆ ಸಂಬಂಧಿಸಿದ ವ್ಯಾಪ್ತಿಯ ವಿದ್ಯುತ್ ಗ್ರಾಹಕರು ಪಾಲ್ಗೊಂಡು ಸಭೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತರು ವಿವಿಧ ಕೃಷಿ ಬೆಳೆಗಳಿಗೆ ವಿಮೆ ಮಾಡಿಸಲು ಸೂಚನೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ರೈತರು ಕೃಷಿ ಬೆಳೆಗಳಿಗೆ ವಿಮೆ ನೋಂದಣಿ ಮಾಡಿಕೊಳ್ಳಬೇಕು ಎಂದು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ನೈಸರ್ಗಿಕ ವಿಕೋಪಗಳಿಂದಾಗಿ ಬೆಳೆ ಹಾನಿಯಾದರೆ, ರೈತರು ವಿಮಾ ಯೋಜನೆಯು ಉಪಯೋಗವಾಗಲಿದೆ.

ನೋಂದಣಿಗೆ ಒಳಪಡುವ ಬೆಳೆಗಳು ಹಾಗೂ ನೋಂದಣಿಗೆ ಕೊನೆಯ ದಿನ: ಮುಸುಕಿನ ಜೋಳ, ಜೋಳ, ಸೂರ್ಯಕಾಂತಿ, ತೊಗರಿ, ಹತ್ತಿ, ಕೆಂಪು ಮೆಣಸಿನಕಾಯಿ ಹಾಗೂ ಈರುಳ್ಳಿ ಬೆಳಿಗಳಿಗೆ ಜುಲೈ 31 ಕೊನೆಯ ದಿನವಾಗಿದೆ. ರಾಗಿ, ನವಣೆ, ಹುರುಳಿ, ನೆಲಗಡಲೆ, ಸಜ್ಜೆ, ತೊಗರಿ, ಭತ್ತ ಬೆಳೆಗಳಿಗೆ ಆಗಸ್ಟ್ 16 ಕೊನೆಯ ದಿನವಾಗಿದೆ. ಬೆಳೆ ವಿಮೆ ನೋಂದಣಿಗಾಗಿ ರೈತರು ಹತ್ತಿರದ ಸಾಮಾನ್ಯ ಸೇವಾ ಕೇಂದ್ರ, ಅಥವಾ ರೈತರು ತಮ್ಮ ವ್ಯವಹಾರದ ಬ್ಯಾಂಕ್‌ಗಳಿಗೆ ಸಂಪರ್ಕಿಬಹುದು.

ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ವಿಮಾ ಸಂಸ್ಥೆಯ ತಾಲ್ಲೂಕು ಪ್ರತಿನಿಧಿ (ಮೊ.8277472721) ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫಿಜಿಯೋಥೆರಪಿಸ್ಟ್, ಆಯಾ ಹುದ್ದೆಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಗಂಗಾವತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಮನ್ವಯಾಧಿಕಾರಿಗಳ ಕಾರ್ಯಾಲಯದಿಂದ 2024-25ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆ ಹಾಗೂ ಸಮನ್ವಯ ಶಿಕ್ಷಣ ಶೀರ್ಷಿಕೆಯಡಿ ವಿಶೇಷ ಚೇತನ ಮಕ್ಕಳಿಗೆ ಫಿಜಿಯೋಥೆರಪಿ ಚಿಕಿತ್ಸೆ ನೀಡಲು ಫಿಜಿಯೋಥೆರಪಿಸ್ಟ್ ಹುದ್ದೆಗೆ ಹಾಗೂ ಶಾಲಾ ಸಿದ್ಧತೆ ಕೇಂದ್ರದಲ್ಲಿ ಕಾರ್ಯನಿರ್ವಹಿಸಲು ಆಯಾ ಹುದ್ದೆಗೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಫಿಜಿಯೋಥೆರಪಿಸ್ಟ್ ಮತ್ತು ಆಯಾ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಜುಲೈ 26ರ ಒಳಗಾಗಿ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಸಂಗಾಪುರದಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಗಂಗಾವತಿ ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಮನ್ವಯಾಧಿಕಾರಿಗಳು ತಿಳಿಸಿದ್ದಾರೆ.

# ಜರ್ಮನಿಯಲ್ಲಿ ನರ್ಸಿಂಗ್ ಉದ್ಯೋಗಾವಕಾಶ; ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಜರ್ಮನ್ ಸರ್ಕಾರದಿಂದ ಮಾನ್ಯತೆ ಹೊಂದಿದ ಮೆ.ಟ್ಯಾಲೆಂಟ್ ಆರೇಂಜ್ ಸಂಸ್ಥೆ ವತಿಯಿಂದ ಜರ್ಮನಿಯಲ್ಲಿ ನರ್ಸ್ ಆಗಿ ಉದ್ಯೋಗಾವಕಾಶ ಹೊಂದಲು ಅರ್ಹ ಬಿಎಸ್ಸಿ ಅಥವಾ ಜಿಎನ್‌ಎಂ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಬಳ್ಳಾರಿ ಉಪವಿಭಾಗದ ಕಾರ್ಮಿಕ ಅಧಿಕಾರಿ ಕಮಲ್‌ಷಾ ಅಲ್ತಾಫ್ ಅಹ್ಮದ್ ತಿಳಿಸಿದ್ದಾರೆ.

ಅರ್ಹತೆಗಳು:

ನರ್ಸಿಂಗ್ ಪೂರ್ಣಗೊಳಿಸಿದ ಆಸಕ್ತ ಉದ್ಯೋಗಾಂಕ್ಷಿಗಳು ಬಿಎಸ್ಸಿ, ಜಿಎನ್‌ಎಂ ವಿದ್ಯಾರ್ಹತೆ ಹೊಂದಿರಬೇಕು. 38 ವರ್ಷದೊಳಗಿನ ಮಹಿಳೆ, ಪುರುಷ ಅಭ್ಯರ್ಥಿಗಳಾಗಿರಬೇಕು. ಅನುಭವುಳ್ಳ ಅಥವಾ ಹೊಸಬರು ಅರ್ಜಿ ಸಲ್ಲಿಸಬಹುದು. ಕಡ್ಡಾಯವಾಗಿ ಭಾರತೀಯ ನರ್ಸಿಂಗ್ ಲೈಸೆನ್ಸ್ ಹೊಂದಿರಬೇಕು. ಮಹಿಳಾ ಅಭ್ಯರ್ಥಿಗಳು ಮಕ್ಕಳನ್ನು ಹೊಂದಿದಲ್ಲಿ ತಮ್ಮೊಡನೆ ಕರೆದೊಯ್ಯುವ ಅವಕಾಶ ಇರುವುದಿಲ್ಲ. ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಕೇರಳ ರಾಜ್ಯದ ತಿರುವನಂತಪುರ ತರಬೇತಿ ಕೇಂದ್ರದಲ್ಲಿ 08 ತಿಂಗಳ ಕಾಲ ಜರ್ಮನ್ ಭಾಷೆಯ ತರಬೇತಿ ನೀಡಲಿದ್ದು, ಸಂಸ್ಥೆ ವತಿಯಿಂದ ಊಟ, ವಸತಿ ಮತ್ತು ಉಚಿತ ಪ್ರಯಾಣ ವ್ಯವಸ್ಥೆ ಕಲ್ಪಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ನಲ್ಲಚೆರವು ಪ್ರದೇಶದ ಕೌಲ್‌ಬಜಾರ್‌ನ ಮಹಮ್ಮದೀಯ ಕಾಲೇಜು ಹಿಂಭಾಗದ ಬಳ್ಳಾರಿ ಉಪವಿಭಾಗದ ಕಾರ್ಮಿಕ ಅಧಿಕಾರಿಗಳ ಕಚೇರಿ ಅಥವಾ ದೂ.08392-254875 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

14 ಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
ಈಗ ನಿಮ್ಮ ಮಾತೃ ಭಾಷೆಯಲ್ಲಿ
www.hampitimes.com

ಬೇಕಾಗಿದ್ದಾರೆ
Marketing Executive
Attractive remuneration and Excellent career development opportunities wait to the right candidate
Job Location: HOSAPETE - VIJAYANAGARA Dist.
94825 99089 / 94486 33038

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
ನಿಮ್ಮ ಹಂಪಿ ಪ್ರವಾಸ ಅನುಭವ
ನೀವು ಹಂಪಿಗೆ ಭೇಟಿ ನೀಡಿದ್ದೀರಾ?
ಈ ಹಿಂದೆ ಹಂಪಿ ಹೇಗಿತ್ತು, ಈಗ ಹೇಗಾಗಿದೆ,
ಮುಂದೆ ಏನೆಲ್ಲಾ ಸೌಲಭ್ಯಗಳು ಪ್ರವಾಸಿಗರಾಗಿ ನೀವು ನಿರೀಕ್ಷಿಸುತ್ತೀರಿ?
ನಿಮ್ಮದೆ ಅಭಿಪ್ರಾಯಗಳನ್ನು 200 ಪದಗಳಲ್ಲಿ ಬರೆದು ಕಳುಹಿಸಿ,
ಹಂಪಿ ಟೈಮ್ಸ್ ಮೂಲಕ ಅಧಿಕಾರಿಗಳ ಗಮನ ಸೆಳೆಯಿರಿ.
ಹಂಪಿ ಪ್ರವಾಸೋದ್ಯಮ ಅಭಿವೃದ್ಧಿಗೆ ನಿಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುವುದರೊಂದಿಗೆ ಪ್ರವಾಸೋದ್ಯಮ ಪ್ರಗತಿಗೆ ಸಹಕರಿಸಿ.
ನಿಮ್ಮ ಅಭಿಪ್ರಾಯದೊಂದಿಗೆ ಹಂಪಿಗೆ ಭೇಟಿ ನೀಡಿದ ಕ್ಷಣದ ನಿಮ್ಮ ಫೋಟೊ ಇರಲಿ. ನಿಮ್ಮ ಅಭಿಪ್ರಾಯಗಳನ್ನು ಈ ಕೆಳಗಿನ ಇ-ಮೇಲ್/ ವಾಟ್ಸಪ್‌ಗೆ ಕಳುಹಿಸಿರಿ.
www.hampitimes.com
epaper.hampitimes.com
hampitimes@gmail.com
@hampitimes
9448633038

Printed by: MANJUNATHA .H .B Published by: A. SHUBHA. Owned by: A. SHUBHA and Printed at: AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA